# ಅಧ್ಯಾಯ - 6

# ಕಾಡುಗೊಲ್ಲರ ಕಾವ್ಯಗಳಲ್ಲಿ ಅಂಗಸಂಬಂಧೀ ಸಂಘರ್ಷ

**6.1** ಪುರುಷ ಪ್ರಾಧಾನ್ಯತೆ

**6.2** ಸತಿ ಪದ್ಧತಿ

# ಅಧ್ಯಾಯ - 6

# ಕಾಡುಗೊಲ್ಲರ ಕಾವ್ಯಗಳಲ್ಲಿ ಲಿಂಗಸಂಬಂಧೀ ಸಂಘರ್ಷ

## 1.1 ಪುರುಷ ಪ್ರಾಧಾನ್ಯತೆ

ಆರ್ಯರ ಆಗಮನಪೂರ್ವದ ಭಾರತದಲ್ಲಿ ಮಾತೃಮೂಲ ಸಂಸ್ಕೃತಿ ಪ್ರಚಾರದಲ್ಲಿ ಇದ್ದು, ಹೆಣ್ಣಿಗೆ ಉತ್ತಮ ಸ್ಥಾನಮಾನಗಳು ಇದ್ದುದಾಗಿ ಸಾಂಸ್ಕೃತಿಕ ಚರಿತ್ರೆಕಾರರ ಅಭಿಮತವಾಗಿದೆ. ಯಾವಾಗ ಆರ್ಯಸಂಸ್ಕೃತಿ ಆರಂಭವಾಯಿತೋ ಅಂದಿನಿಂದಲೇ ಹೆಣ್ಣು ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳುತ್ತಾ ಪುರುಷನ ಅಧೀನದಲ್ಲಿ ನೆಲೆಗೊಳ್ಳಲಾರಂಭಿಸಿದಳು. ಪುರುಷನ ಆಧಿಪತ್ಯ ಕಾಲಮಾನಕ್ಕೆ ವಿಸ್ತಾರವಾಗುತ್ತಾ ಬಂದಿತು. ವೇದಗಳು ಪುರಾಣಗಳು ಸ್ಮೃತಿಗಳು, ರಾಮಾಯಣ ಮಹಾಭಾರತ ಮುಂತಾದ ವೈದಿಕ ಪ್ರಮಾಣೀಕೃತ ಗ್ರಂಥಗಳಲ್ಲಿ ಹೆಣ್ಣನ್ನು ಅತ್ಯಂತ ಕೆಳಸ್ಥರದಲ್ಲಿ ಕಂಡಿರಿಸಲಾಗಿದೆ. ವೈದಿಕ-ಅವೈದಿಕ ಪರಂಪರೆಗಳ ಸಂಘರ್ಷದ ಕಾಲಘಟ್ಟದಲ್ಲಿ ಹೊರಬಂದ ಮನುವನ್ನಂತೂ ಸ್ತ್ರೀ ಕುಲದ ಸರ್ವತ್ರ ನಾಶಕನೆಂದೇ ಪರಿಭಾವಿಸಲಾಗಿದೆ. ಇದಕ್ಕೆ ಪೂರಕವಾಗಿ ಕೌಟಿಲ್ಯನೂ ದನಿ ಸೇರಿಸುತ್ತಾನೆ. **'ಒಳ್ಳೆಯದನ್ನ ಬಯಸುವವರು ಸ್ತ್ರೀಯರಲ್ಲಿ ನಂಬಿಕೆ ಇಡಬಾರದು'** ಎಂದು ಕಟ್ಟಪ್ಪಣೆಯನ್ನು ಹೊರಡಿಸುತ್ತಾನೆ.

ಬೌದ್ಧಧರ್ಮದಲ್ಲಿ ಹೆಣ್ಣಿಗೆ ಸಮಾನತೆ ಇತ್ತು ಎಂಬಂತಹ ಅಭಿಪ್ರಾಯ ಪ್ರಚಲಿತದಲ್ಲಿದೆ. ಆದಾಗ್ಯೂ ಸ್ತ್ರೀಸಂವೇದನೆ ವಿಚಾರಗಳಿಗೆ ಸಂಬಂಧಿಸಿದಂತೆ ಇಲ್ಲಿಯೂ ಸಹ ಅಪಸ್ವರಗಳು ಕಂಡು ಬರುತ್ತವೆ. 'ನರಕಕ್ಕೆ ನಾರಿದಾರಿ' ಅನ್ನುವಂಥ ವೈದಿಕ ಸಮನಾಂತರ ಸನ್ನಿವೇಶಗಳ ಬೌದ್ಧ ಸಾಹಿತ್ಯದಲ್ಲಿಯೂ ಇಣುಕುಹಾಕಿವೆ. **"ಹೆಣ್ಣು ಹಿಂಗದ ಕಾಮುಕ ಪ್ರಾಣಿ. ಮದುವೆ ಯೆಂದರೆ ಮರಣ. ಚಂಚಲತೆಯ ಮತ್ತೊಂದು ರೂಪವೇ ಹೆಣ್ಣು"** ...... ಮುಂತಾಗಿ ಪ್ರಚಾರಮಾಡಿದ ಉದಾಹರಣೆಗಳಿವೆ.

ಜೈನ ಸಂಸ್ಕೃತಿಯಲ್ಲೂ ಸಹ ಭವಾಂತರಗಳ ಕರ್ಮದ ಫಲವಾಗಿಯೇ ಸ್ತ್ರೀಜನ್ಮ ಉಂಟಾಗುತ್ತದೆ ಎಂಬ ನಂಬಿಕೆಯಿದೆ. ಇಲ್ಲಿಯೂ ಸಹ ಹೆಣ್ಣು ನೆಮ್ಮದಿಯ ನಿಟ್ಟುಸಿರು ಬಿಟ್ಟಿಲ್ಲ. ಹಾಗೇ ನೋಡಿದರೆ 12ನೇ ಶತಮಾನದ ಶರಣರು ಹೆಣ್ಣಿಗೆ ಸೂಕ್ತ ಸ್ಥಾನಮಾನ ನೀಡಿ ಗೌರವಿಸಿದ ಅನೇಕ ನಿದರ್ಶನಗಳು ಕಂಡು ಬರುತ್ತವೆ. ಲಿಂಗತಾರಮ್ಯದ ವಿರುದ್ಧ ಸಂಘಟನಾತ್ಮಕವಾಗಿ ಹೋರಾಟ ನಡೆಸಲಾಯ್ತು. ಸ್ತ್ರೀವಾದಿ ಕಾಳಜಿಗೆ ಹೆಚ್ಚು ಒತ್ತುಕೊಡಲಾಯ್ತು. ತದನಂತರದ ಕಾಲಮಾನದಲ್ಲಿ ಮತ್ತೆ ಹಿಂದಿನ ಯಥಾಸ್ಥಿತಿ ಮುಂದುವರಿಯಿತು. ಬೌದ್ಧರ, ಶರಣರ ಕಾಲವನ್ನು ಹೊರತುಪಡಿಸಿದರೆ ಹೆಣ್ಣಿನ ಬವಣೆ ಯಾವ ಕಾಲಕ್ಕೂ ಇಂಗಿ ಬತ್ತಿಹೋಗಲೇ ಇಲ್ಲವೆಂದು ಹೇಳಬಹುದು.

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣು ದೈಹಿಕ ಮತ್ತು ಮಾನಸಿಕವಾಗಿ ದುರ್ಬಲಳು ಎಂಬ ಕಲ್ಪನೆಯನ್ನು ಜೀವಶಾಸ್ತ್ರಜ್ಞರು ಸಾರಾಸಗಟಾಗಿ ನಿರಾಕರಿಸುತ್ತಾರೆ. ಭ್ರೂಣಾವಸ್ಥೆಯಿಂದಲೇ ಹೆಣ್ಣು ಗಂಡಿಗಿಂತ ಹೆಚ್ಚು ಸಶಕ್ತಳು ಎಂಬಂಶವನ್ನು ಪ್ರಯೋಗಾತ್ಮಕವಾಗಿ ಸ್ಥಿರಪಡಿಸಿದ್ದಾರೆ. ಇದಕ್ಕೆ ಪೂರಕವಾಗಿ ಮಾನಸಿಕವಾಗಿ ಹೆಣ್ಣು ಗಂಡಿಗಿಂತ ಕಡಿಮೆಯಲ್ಲ ಎಂದು ಮನೋವಿಜ್ಞಾನಿಗಳು ಪ್ರಮಾಣಿಸಿ ತೋರಿಸಿದ್ದಾರೆ. ಹೆಣ್ಣು- ಗಂಡಿನ ನಡುವೆ ಇರುವುದು ಕೇವಲ ದೈಹಿಕ ವ್ಯತ್ಯಾಸದಲ್ಲಿ ಮಾತ್ರ. ಹಾಗಾಗಿ ಇವರಿಬ್ಬರಲ್ಲಿ ಒಬ್ಬರು ಉತ್ತಮ ಇನ್ನೊಬ್ಬರು ಕೀಳು ಎಂಬುದು ಸರ್ವಥಾಸಲ್ಲದು. "ಗಂಡೆಂದರೆ ಹೀಗಿರಬೇಕು, ಹೆಣ್ಣು ಹೀಗೆ ವರ್ತಿಸಬೇಕು ಎಂದು ಸಮಾಜ ನಮ್ಮ ಪಾತ್ರಗಳನ್ನು ನಿರ್ಧರಿಸುತ್ತದೆ. ಇವನ್ನು ಮನೋವಿಜ್ಞಾನದಲ್ಲಿ **'ಲಿಂಗಪಾತ್ರ'**ಗಳು **(Sexroles)** ಎನ್ನುತ್ತಾರೆ. **'ಹೆಣ್ತನ' (Femininity)** ಮತ್ತು **'ಗಂಡಸುತನ' (Masulinity)** ಎಂಬ **'ಲಿಂಗಪ್ರಕಾರ'**ಗಳು ಸಮಾಜದಲ್ಲಿವೆ. ಇಂಥ ವಿಭಜನೆ ಎಷ್ಟರ ಮಟ್ಟಿಗೆ ಸಮಂಜಸವಾದುದು?" ಎಂಬುದಾಗಿ ಮನೋವಿಜ್ಞಾನಿ ಡಾ|| ಇಂದಿರಾ ಜೈಪ್ರಕಾಶ್ ಪ್ರಶ್ನಿಸುತ್ತಾರೆ. **(ಮನೋವಿಜ್ಞಾನ-ಪು : 89)**

ಲಿಂಗೀಕರಣ ಪ್ರವೃತ್ತಿಗಳು ಕುಟುಂಬದೊಳಗೇ ಆರಂಭವಾಗುತ್ತವೆ ಮತ್ತು ಸಾಮಾಜಿಕ ಸಂರಚನೆಯಲ್ಲಿ ಮುಂದು ವರಿಯುತ್ತವೆ. "ಹೆಣ್ಣನ್ನು ಹುಟ್ಟಲು ಬಿಡದ ಲಿಂಗವ್ಯವಸ್ಥೆಯ ಕ್ರೌರ್ಯ ಹುಟ್ಟಿದ ಹೆಣ್ಣನ್ನು ಬದುಕಲು ಬಿಟ್ಟಿಲ್ಲ. ತನ್ನ ಬದುಕು ಹಾಗೂ ಹಕ್ಕುಗಳ ಬಗ್ಗೆ ಪೂರ್ಣ ಕುರುಡಾಗಿರುವ ಹೆಣ್ಣು, ಪ್ರಶ್ನಿಸುವ ಪ್ರಜ್ಞೆ ಹಾಗೂ ಪ್ರತಿಭಟಿಸುವ ಧೈರ್ಯ ಮನಸ್ಸು ಎಲ್ಲವೂ ಗಂಡಿಗಾಗಿ ಎನ್ನುವ ಆದರ್ಶತನದ ನೆಲೆಯ ಪ್ರವೃತ್ತಿಗಳೇ" ಎಂಬ ಗಾಯತ್ರಿನವಾಡ ಅವರ ಅಭಿಪ್ರಾಯ **(ಮಹಿಳಾ ಸಂಕಥನ-ಪು : 169)** ಗಮನಾರ್ಹವಾದುದಾಗಿದೆ.

ಹೆಣ್ಣನ್ನು ಕುರಿತ ಒಂದು ಸಂಸ್ಕೃತಿಯ ದೃಷ್ಟಿಕೋನಕ್ಕೂ ಆಯಾ ಸಂಸ್ಕೃತಿಯನ್ನು ಪಡೆದಿರುವ ಸಮಾಜದ ನೈತಿಕ ಚೈತನ್ಯಕ್ಕೂ ನೇರ ಸಂಬಂಧವಿದೆಯೆಂಬುದು ಸಂಸ್ಕೃತಿ ಚಿಂತಕರಲ್ಲಿ ಏಕಾಭಿಪ್ರಾಯವಿದೆ. "ಹೆಣ್ಣಿನ ಮೇಲೆ ಕೆಂಡದ ಮಳೆಯನ್ನು ಸುರಿಯುವುದು ಯಾವುದೋ ಒಂದೆರಡು ಸಂಸ್ಕೃತಿಗಳಲ್ಲ. ಜಗತ್ತಿನ ನಾಗರಿಕ ಎನಿಸಿಕೊಳ್ಳುವ ಬಹುತೇಕ ಸಮಾಜಗಳ ಸಂಸ್ಕೃತಿಗಳೂ ಕೂಡ ಪಾಲುದಾರವಾಗಿವೆ" ಎಂಬ ಡಾ|| ರಹಮತ್‌ತರೀಕೆರೆಯವರ ಅಭಿಪ್ರಾಯ ನಿಜಸ್ಥಿತಿ ಯಿಂದ ಕೂಡಿದ್ದಾಗಿದೆ. ಸಾಂಸ್ಕೃತಿಕವಾದ ಈ ದೃಷ್ಟಿಕೋನಗಳನ್ನು ರೂಪಿಸುವುದು ಅಂತಿಮವಾಗಿ ಚರಿತ್ರೆಯಲ್ಲಿ ಸಂಭವಿಸಿದ ಆರ್ಥಿಕ ಪಲ್ಲಟಗಳು, ದುಡಿಯುವ ಅವಕಾಶಗಳು ಕಡಿಮೆಗೊಳಿಸುತ್ತಾ ಪುರುಷರ ಅವಲಂಬನೆಯಲ್ಲಿ, ರಕ್ಷಣೆಯಲ್ಲಿ ಬಾಳ ಬೇಕಾದ ಸ್ಥಿತಿಯನ್ನು ಪಡೆಯುತ್ತಾ ಹೋದಳೋ ಅಂದಿನಿಂದ ನಿಕೃಷ್ಟಳು, ವೈಭವೀಕರಿಸಲ್ಪಟ್ಟವಳು, ಭೋಗಕ್ಕೊಳಗಾಗುವಳು ಆದಳು. ಒಟ್ಟಿನಲ್ಲಿ ಸಮಾನಳಲ್ಲದವಳು ಆದಳು. **(ಮರದೊಳಗಣಕಿಚ್ಚು-ಪು : 204)**

ಶಿಷ್ಟಸಂಸ್ಕೃತಿ– ಸಾಹಿತ್ಯದಲ್ಲಿರುವಂತೆಯೇ ಜನಪದ ಸಂಸ್ಕೃತಿ–ಸಾಹಿತ್ಯದಲ್ಲಿಯೂ ಹೆಣ್ಣಿನ ಬವಣೆಯ ಬದುಕು ಭಿನ್ನವಾದುದಾಗೇನೂ ಕಂಡು ಬರುವುದಿಲ್ಲ. ಇಲ್ಲಿ ಹೆಣ್ಣಿನ ಬಗೆಗಿನ ನಲುವಿನ ಬುಗ್ಗೆಗಳಿದ್ದಂತೆ ನೋವಿನ ಹೊಂಡಗಳೂ ಇವೆ. ನೀತಿ, ನಿಯಮ ಕಟ್ಟುಪಾಡುಗಳ **'ಸರಿಗುಣಿಕೆ'**ಗಳಿಗೂ ಕೊರತೆಯಿಲ್ಲ. ಜನಪದ ಸಾಹಿತ್ಯವನ್ನು ಅವರ ಪೌರಾಣಿಕ ಬಲೆಯಿಂದ ಹೊರತೆಗೆದು ನೋಡಬೇಕಾಗಿದೆ. ಆಗ ಮಾತ್ರ ಹೆಣ್ಣಿನ ವಾಸ್ತವ ಬದುಕು ಬಿಚ್ಚಿಕೊಂಡ ಬಗ್ಗೆ ಲೋಕದೃಷ್ಟಿಯನ್ನು ಕಾಣಲು ಸಾಧ್ಯವಾಗುತ್ತದೆ.

ಕಾಡುಗೊಲ್ಲರ ಸಂಸ್ಕೃತಿ–ಸಾಹಿತ್ಯದಲ್ಲಿ **'ಗೌರಸಂದ್ರಮಾರಿ'**ಗೆ ಎಲ್ಲಿಲ್ಲದ ಆಧ್ಯತೆ ನೀಡಲಾಗಿದೆ. **'ಮುಂಗನಸಿನ ಮಹಾರಾಣಿ'** ಎಂದೇ ಪರಿಭಾವಿಸಲಾಗಿರುವ ಈಕೆ ಕಾವ್ಯನಾಯಕರುಗಳ ಆಪದ್ಭಾಂದವಳನ್ನಾಗಿ ಚಿತ್ರಿಸಲಾಗಿದೆ. ಆದರೆ, ಕಾವ್ಯದೊಳಗಿನ ಬಹುತೇಕ ಹೆಣ್ಣುಗಳ ನಿಜಪಾತ್ರಗಳನ್ನು ಮಾತ್ರ ಪುರುಷಾಧೀನರನ್ನಾಗಿ ಎಣೆಗೊಳಿಸಲಾಗಿದೆ. ಹೆಣ್ಣಿನ ವೈಧವ್ಯ ವಿಧಿ ವಿಧಾನಗಳ ಬಗ್ಗೆ ಅತ್ಯಂತ ಪ್ರಗತಿಪರ ಜೀವಸೆಲೆಯನ್ನು ಮೂಡಿಸುವ ಈ ಬುಡಕಟ್ಟು ಹೆಣ್ಣಿನ **'ಹುಟ್ಟು–ಮುಟ್ಟು'**ಗಳ ಸಂದರ್ಭದಲ್ಲಿ ಕಠೋರ ನಿಲುವನ್ನು ತಳೆಯುತ್ತದೆ.

ಗೊಲ್ಲ ಬುಡಕಟ್ಟಿಗೆ ಕಟ್ಟುಕರಾರುಗಳನ್ನು ನಿಗದಿಪಡಿಸಿದ **'ಎತ್ತಪ್ಪ'** ತನ್ನ ಪತ್ನಿಯನ್ನು ನೋಡುವ ದೃಷ್ಟಿಕೋನ ಪುರುಷ ಪ್ರಾಧಾನ್ಯ ನಡಾವಳಿಗೆ ನೇರ ಉದಾಹರಣೆಯಾಗಿ ನಿಲ್ಲಬಲ್ಲದು. **'ಬಂಗಾರದ ಮನಿಯಾಗೆ ಹೂವತೋಟ್ಟಿಲಾಗೆ ಬಾಳೆ ಎಲೆಯಾಂಗೆ'** ಬಳುಕುತ್ತಿದ್ದ ಗೆಜ್ಜೆಕಾಲು ಮಲ್ಲಮ್ಮಳನ್ನು ಎತ್ತಯ್ಯ ವಿಧಿವತ್ತಾಗಿ ಮದುವೆ ಮಾಡಿಕೊಳ್ಳುತ್ತಾನೆ. ಆದರೆ, ಮುದುವೆ ದಿನದಿಂದಲೇ ದಾಂಪತ್ಯದ ಬಗ್ಗೆ ನಿರಾಸಕ್ತಿ ಹೊಂದುತ್ತಾನೆ. ಆದಾಗ್ಯೂ ಮಲ್ಲಮ್ಮ ಧೃತಿಗೆಡದೆ ನಿತ್ಯ ಗೋಸೇವೆ ಯಲ್ಲಿ ನಿರತಳಾಗುವುದರ ಮೂಲಕ ಪತಿಭಕ್ತಿಯನ್ನು ತೋರುತ್ತಾಳೆ. ಅಲ್ಲದೆ ಪಾರಂಪರಿಕ ಪಶುಪಾಲನೆಯ ವೃತ್ತಿಕಾರ್ಯ ದಲ್ಲಿ ಎತ್ತಯ್ಯನಿಗೆ ಸಹಕಾರಿಯಾಗಲು ಅನುವಾಗುತ್ತಾಳೆ. ಆದಾಗ್ಯೂ ಎತ್ತಯ್ಯ ತನ್ನ ಹೆಂಡತಿಯನ್ನು **'ಹೆಣ್ಣು'** ಎಂಬ ಕಾರಣಕ್ಕೆ ಅವಳಿಗೆ **'ಮನೋಹಿಂಸೆ'**ಯನ್ನು ಕೊಡಲು ಅನುವಾಗುತ್ತಾನೆ. ಮಲ್ಲಮ್ಮ ದನವಿನ ಕೊಟ್ಟಿಗೆಯೊಳಗೆ ದನಗಳ ಆರೈಕೆ ಮಾಡುತ್ತಿದ್ದುದನ್ನು ಗಮನಿಸಿದ ಎತ್ತಯ್ಯ ಅವಳನ್ನು ನಿರ್ದಾಕ್ಷಿಣ್ಯವಾಗಿ ಕೊಟ್ಟಿಗೆಯಿಂದ ಹೊರಕ್ಕೆ ದಬ್ಬಿಸುತ್ತಾನೆ. ಹೆಣ್ಣು ಹೊಕ್ಕ ದೋಷಕಳೆಯಲು **'ಹೊರಬೀಡು'** ತಿರುವಲು ಹೊರಡುತ್ತಾನೆ. ಮಲ್ಲಮ್ಮ ಪ್ರತಿರೋಧ ವ್ಯಕ್ತಪಡಿಸದೆ ಬುತ್ತಿಕಟ್ಟಿ ತಳುಕಿನ ಗುಡ್ಡದಲ್ಲಿ ಉಣಲೆಂದು ಕೊಡುತ್ತಾಳೆ. ಎತ್ತಯ್ಯ ಒಂದುವಾರವಾದರೂ ಬುತ್ತಿಬಿಚ್ಚುವುದಿಲ್ಲ. **'ಹೆಂಗಸಿನ ಕೈಯಲ್ಲಿ ಉಂಡರೆ ತನ್ನ ಬತ ಕೆಡುತ್ತದೆ'** ಎಂಬುದು ಎತ್ತಯ್ಯನ ನಂಬಿಕೆಯಾಗಿತ್ತು.

ಬೇವಿನ ಮರಹಾರುವ ಜೂಜಿನಲ್ಲಿ ಎತ್ತಯ್ಯ ಗೆದ್ದ ಸಂತೋಷಕ್ಕೆ ಹೆಂಡತಿ ಮಲ್ಲಮ್ಮ ಹಬ್ಬದ ಅಡುಗೆ ಮಾಡಿ ಉಣ್ಣಲಿಕ್ಕೆ ತನ್ನ ಗಂಡನನ್ನು ಕರೆಯುತ್ತಾಳೆ–

**ನೀವೊಂದು ತುತ್ತೆ ಉಣಬನ್ನಿ ದರುಮಾಕೆ**
**ಒಯ್ಯಾಧಾರೆ ಒಯ್ದು ಋಣವೀಗೆ**

**(ಮೀಶಿ–ಕಾಬುವೀ–236)**

ಮಲ್ಲಮ್ಮನ ಮನಸ್ಥಿತಿಯ ವೇದನೆಯ ತೀಕ್ಷಣತೆ ಇಲ್ಲಿ ಗೋಚರಿಸುತ್ತದೆ. ಧಾರೆ ಎರೆದ ಋಣಕ್ಕಾದರೂ ಒಂದು ಕೈತುತ್ತು ತಿನ್ನಲಿ ಎಂಬ ಮನೋಅಭೀಪ್ಸೆ ಮಲ್ಲಮ್ಮನದು. ಆದರೆ ಎತ್ತಯ್ಯ **'ಆವಿನಗೂಡಾಗೆ ಆಲಡಿಗೆ ಮಾಡಿದ್ದೆ ಈಗುಂಡೆ ಮಲ್ಲಿ ಅಸುವಿಲ್ಲ'** ಎಂಬ ನೆಪಹೇಳಿ ನಿರಾಕರಿಸುತ್ತಾನೆ. ತನ್ನ ಕೈಅಡುಗೆ ಬಡಿಸುವ ಭಾಗ್ಯವಿಲ್ಲವೆಂದು ಮಲ್ಲಮ್ಮ ಮನದಲ್ಲೇ ಮರುಗುತ್ತಾಳೆ.

**ಹುಲಿಕುಂಟೆರಂಗಣ್ಣ** ದೊರೆಯೊಂದಿಗೆ ಪಗಡೆಯಾಟದ ಸೋಲು ಗೆಲುವಿನ ಸಣೆಸಾಟದಲ್ಲಿ ಎತ್ತಯ್ಯ ಮುಳುಗಿರುತ್ತಾನೆ. ತನ್ನ ಮುಖ ತೋರಿಸಿದರೆ ಎತ್ತಯ್ಯನಿಗೆ ಗೆಲವು ಖಚಿತ ಎಂಬ ಮಾರಮ್ಮಳ ಸಲಹೆಯಂತೆ ಉಪಾಯದಿಂದ ಮಲ್ಲಮ್ಮ ಜೂಜಿನ ಸ್ಥಳಕ್ಕೆ ಹೋಗುತ್ತಾಳೆ. ಅಚಾನಕ್ಕಾಗಿ ಮಲ್ಲಮ್ಮಳ ಮುಖ ನೋಡಿದ ಎತ್ತಯ್ಯನಿಗೆ ಸಿಟ್ಟು ನೆತ್ತಿಗೇರುತ್ತದೆ. ಚೆಂಡಿನಿಂದ ಮಲ್ಲಮ್ಮಳಿಗೆ ಎಸೆಯುತ್ತಾನೆ. ಮಲ್ಲಮ್ಮ ಉಪರಿಗೆಯಿಂದ ಕೆಳಬಿದ್ದು ನೋವನ್ನು ಅನುಭವಿಸುತ್ತಾಳೆ. ಉಪ್ಪರಿಗೆಯಲ್ಲಿ ಜೂಜಾಡುತ್ತಿದ್ದ ಎತ್ತಯ್ಯನಿಗೆ ಜಯ ಲಭಿಸುತ್ತದೆ. ಇದಕ್ಕೆ ಕಾರಣ ತನ್ನ ಹೆಂಡತಿಯ ಮುಖದರ್ಶನ ಎಂಬ ನಿಜ ವಿಚಾರವನ್ನು ಎತ್ತಯ್ಯ ಅರಿಯದವನಾಗುತ್ತಾನೆ.

ಸಂಡೂರು ಕಾವಲಿಗೆ ಆವುತಿರುಗಿಸಲು ಎತ್ತಯ್ಯ ನಿರ್ಧರಿಸಿದಾಗ ಮುನಿಶಾಪದ ಮುನ್ಸೂಚನೆ ಅರಿತಿದ್ದ ಮಲ್ಲಮ್ಮ ಎತ್ತಯ್ಯನನ್ನು ತಡೆಯುತ್ತಾಳೆ. ಎತ್ತಯ್ಯ **'ಹೆಂಗಸಾಡಿದ ಮಾತು ಏಳುಜನಿಗೆ ವೊಯ್ದಂಗೆ'** ಎಂಬ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾನೆ. ಆದರೂ ಮಲ್ಲಮ್ಮ ಪರಿಪರಿಯಾಗಿ ಬೇಡಿಕೊಂಡು ಹೋಗದಂತೆ ತಡೆಯೊಡ್ಡುತ್ತಾಳೆ.

**ಗಾಜಿನಕಂಬ ಪಿಡಿಮಿಡಿಯಾದುದಕಂಡೆ**
**ಭಾಗ್ಯವಂತರ ಕೋಟೆ ಬ್ಯಾಗೆಬೀಳಾದುಕಂಡೆ**
**ಎತ್ತಿಗೋಗಬ್ಯಾಡ ಎತ್ತಯ್ಯ ದೊರೆಯೇ**

**(ಮೀಶಿ–ಕಾಬುವೀ–236)**

ಎತ್ತಯ್ಯ ತನ್ನ ಮನಸ್ಸನ್ನು ಬದಲಿಸಲಿಲ್ಲ. ಮಲ್ಲಮ್ಮ ಆತಂಕದಿಂದಲೇ 'ನೀನು ಬದುಕಿದಿಯೋ ಸತ್ತಿದಿಯೋ ಅಂತ ನನಗೆ ಗೊತ್ತಾಗೋದು ಹೆಂಗೆ?' ಎಂದು ಕೇಳಿದ್ದಕ್ಕೆ ಎತ್ತಯ್ಯ ಎಲೆಡಿಕೆ ಹಾಕಿಕೊಂಡು

ತಾಂಬುಲವನ್ನು ಮಲ್ಲಮ್ಮಳ ಸೆರಗಿಗೆ ಉಗಿದು 'ಇದು ಎಲ್ಲಿಯವರೆಗೆ ಕಳಕಳಿಸುತ್ತ ಸುವಾಸನೆ ಬರುತ್ತೋ ಅಲ್ಲಿಯವರೆಗೆ ನಾನು ಬದುಕಿದ್ದೀನಿ ಅಂತ ತಿಳಿ. ಕೆಟ್ಟವಾಸನೆ ಬಂದರೆ ಸತ್ತಿದ್ದೀನಿ ಅಂತ ತಿಳುಕೋ' ಎಂಬ **'ಸಾವು-ಬಾಳು'** ಹೇಳುತ್ತಾನೆ.

ಎತ್ತಯ್ಯ ತಳುಕಿನ ಗುಡ್ಡದಲ್ಲಿ ಮರಣಹೊಂದಿದಾಗ, ಅಳಿಯವಲಿಗಾನಿ, ಸಾಕು ಮಗ ಮಾರಮುತ್ತಣ್ಣ ಎತ್ತಯ್ಯನ ಬಳಿಯಲ್ಲೇ ಜೀವ ಬಿಡುತ್ತಾರೆ. ಆದರೆ ಪತ್ನಿ ಮಲ್ಲಮ್ಮ ಎತ್ತಪ್ಪನ ಗುಡ್ಡದ ಪಾವಿತ್ರ ಕೆಡಿಸಿದಂತೆ ಆಗುತ್ತದೆ ಎಂದು ತಿಳಿದು ವೇಣುಕಲ್ಲು ಗುಡ್ಡದ ಬಳಿ ಕೊನೆಯುಸಿರೆಳೆಯುತ್ತಾಳೆ. ಇಲ್ಲಿ ಮಲ್ಲಮ್ಮಳ ಮರಣದಲ್ಲೂ ತಾರತಮ್ಯವನ್ನು ಕಾಣಬಹುದು. ಪುರುಷರಾದ ಮಾರಮುತ್ತಣ್ಣ, ವಲಿಗಾನಿ ಇವರಿಗೆ ಎತ್ತಯ್ಯನ ಸಾನಿಧ್ಯವಿದೆ. ಹೆಣ್ಣು ಮಲ್ಲಮ್ಮಳ ಮರಣಕ್ಕೆ ಇಲ್ಲಿ ಜಾಗವಿಲ್ಲ. **ಪಾವಿತ್ರದ 'ಕಟ್ಟು' 'ಒಯ್ಯಾಧಾರೆ'** ಯ **ಧರ್ಮಪತ್ನಿ**ಯನ್ನು ದೂರಮಾಡುತ್ತದೆ. 'ಎತ್ತಯ್ಯನ ಶ್ರೇಷ್ಠತೆಯನ್ನು ಪ್ರತಿಪಾದಿಸ ಲೆಂದೇ ಕಲಾವಿದ, ಎತ್ತಯ್ಯನನ್ನು ಸಂಸಾರಿಯಾಗಿ ಚಿತ್ರಿಸಿಯೇ ಇಲ್ಲ. ಅವನು **'ಬೆನವೆತ್ತಯ್ಯ'** ಎಂದು ಕರೆಯುವ ಮೂಲಕ ವೈರಾಗಿಯಾಗಿ ಚಿತ್ರಿಸಿದ್ದಾರೆ' ಎಂದು ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರು ಅಭಿಪ್ರಾಯ ಪಡುತ್ತಾರೆ. **(ಕಾಬುವೀ-177)** ಈ ಅಭಿಪ್ರಾಯ ಎತ್ತಪ್ಪನ **'ಪುರುಷಮನಸ್ಸ'**ನ್ನು ಪ್ರತಿಪಾದಿಸುತ್ತದೆಯೇ ಹೊರತು ಸಂಸಾರಿ ಹೆಣ್ಣೊಬ್ಬಳ ಅಂತರಂಗದ ಬೇಗುದಿಯತ್ತ ಬೆಳಕು ತೋರಲಾರದು. ಇಷ್ಟಾಗಿಯೂ ಎತ್ತಪ್ಪ ಕಳ್ಳಮಡುಗುವಿನ ಅಪ್ಸರೆಯರ ಪ್ರಕರಣದಲ್ಲಿ ಹುಡುಗಾಟಿಕೆಯ ವ್ಯಕ್ತಿತ್ವದವನಂತೆ ಕಂಡು ಬರುತ್ತಾನೆ. ಗುಡ್ಡದ ಬೋರಿಯ ಪ್ರಸಂಗದಲ್ಲಿ **'ಸೋದರಿಕೆ'**ಯನ್ನು ಪ್ರತಿಪಾದಿಸಿ **'ಶೀಲಶೌಚ'** ವನ್ನು ಎತ್ತಿ ಹಿಡಿದು ಪ್ರಬುದ್ಧನಾಗುತ್ತಾನೆ.

ಜುಂಜಪ್ಪನ ಕಾವ್ಯದಲ್ಲಿ ಲಿಂಗತಾರತಮ್ಯ ಸನ್ನಿವೇಶಗಳು ಹೀಗೆ ಬರುತ್ತವೆ.

ಜುಂಜಪ್ಪನ ತಾಯಿ ಚಿನ್ನಮ್ಮ ಬಂಜೆ ಅಪವಾದಕ್ಕೆ ಒಳಗಾಗುವುದು, ಮುಂದೆ ಮಗ ಜುಂಜಪ್ಪನಿಂದಲೇ **'ಶೀಲಸತ್ಯಪರೀಕ್ಷೆ'** ಯನ್ನು ಎದುರಿಸುವುದು ವಿಶೇಷವಾಗಿ ಗಮನಸೆಳೆಯುತ್ತವೆ. ಚಿನ್ನಮ್ಮ ಕಂಪಿಲೆ ಮಲೆಗೊಂಡನ ಹೆಂಡತಿ. ಮೈಗೆ ಹಚ್ಚಿದ ಅರಿಶಿನ ಆರೋಮುಂಚೆನೇ ಮಲೆಗೊಂಡ ದನಗಳನ್ನು ಹೊಡಕೊಂಡು ಕಾಡುಸೇರಿ ಹನ್ನೆರಡು ವರ್ಷಗಳಾದವು. ಇಷ್ಟೂ ವರ್ಷಗಳ ಅವಧಿಯಲ್ಲಿ ಹೆಂಡತಿಯ ಮುಖವನ್ನೇ ನೊಡಲಿಲ್ಲ. ಹಾಗಾಗಿ ಚಿನ್ನಮ್ಮಳಿಗೆ ಸಂತಾನ ಫಲ ಲಬ್ಯವಾಗಲಿಲ್ಲ. ಜನಮಾತ್ರ ಅವಳನ್ನು 'ಆಡಿಕೊಳ್ಳಲು' ಶುರುಮಾಡಿದರು. **'ಕಂಬೇರ ಕರಿಮುಂಡೆ ಗೊಡ್ಡು ಮುಂಡೆ ನೆತ್ತರಗಣ್ಣೋಳು, ರಾವುಗಣ್ಣೊಳು, ಹೊಸಕಾಲೋಳು ಚಿನ್ನಿ ಇನ್ನೂ 'ಕಲ್ಲುಮರ'ವಾಗಿದ್ದಾಳೆ'** ಎನ್ನುತ್ತಾರೆ. **(ಮೀಶಿ-ಕಾಬುವೀ-348).** ಅಲೆಮಾರಿ ಗಂಡನ ದಾಂಪತ್ಯದಲ್ಲಿ 'ಹುಲ್ಲಿನ ಅರಮನೆ'ಯಲ್ಲಿ ಒಂಟಿಯಾಗಿ ಬದುಕುವ ಸಂಕಟಕ್ಕೆ

ಮತ್ತು **'ಬಂಜೆ'** ಎಂಬ ಅಪಮಾನಕ್ಕೆ ಚಿನ್ನಮ್ಮ ದೊಡ್ಡ ಸಾಕ್ಷಿಯಾಗಿ ನಿಲ್ಲುತ್ತಾಳೆ. ಚಿನ್ನಮ್ಮ ತನ್ನ ಮನದಾಳದ ನೋವನ್ನು ಗೌರಸಂದ್ರದ ಮಾರಿಯ ಹತ್ತಿರ ಹೀಗೆ ಬಿಚ್ಚಿಡುತ್ತಾಳೆ-

**ಬೆಂದರಾಜ್ಯದಾಗೆ ಬಂಜೆಂಬುತ್ತಾರೆ.**
**ಬಂಜೆಂಬ ಸೊಲ್ಲ ಬಿಡಿಸಮ್ಮ-ಗೌರಸಂದ್ರದ**
**ಸತ್ಯವ್ವ ಕೊಡೆತಾಯ ಫಲಗಾಳ ॥**
**ಆಳುರಾಜ್ಯದಾಗೆ ಗೊಡ್ಡಿ ಎಂಬುತಾರೆ**
**ಗೊಡ್ಡೊಂಬ ಸೊಲ್ಲ ಬಿಡಿಸಮ್ಮ ॥**

**(ಹನೂರು-ಜಪೀಗೀ-126)**

ಮಕ್ಕಳ ಫಲದಿಂದ ಮುಂದೆ ಒದಗುವ ಗಂಡಾಂತರಗಳನ್ನು ಗೌರಸಂದ್ರದ ಮಾರಿ ಪರಿಪರಿಯಾಗಿ ತಿಳಿಸಿದರೂ ಚಿನ್ನಮ್ಮ ಕೇಳದೆ 'ಸಂಜೇಲಿ ಹುಟ್ಟಿ ಮುಂಜಾನೆ ಸಾಯಲಿ ನನಗೆ ಮಗು ಬೇಕು' ಎಂದು ಮಕ್ಕಳ ಫಲಕ್ಕಾಗಿ ಹಠ ಹಿಡಿಯುತ್ತಾಳೆ. ಅನಿವಾರ್ಯವಾಗಿ ಮಾರಮ್ಮ ಶಿವಪಾರ್ವತಿ ಆಶೀರ್ವಾದದೊಂದಿಗೆ ವೀರಭದ್ರನ ಅಂಶವನ್ನು ಪಡೆದು ಚಿನ್ನಮ್ಮಳಿಗೆ ಕೊಡುವ ಸಲಹೆ ಮತ್ತು ಕಿವಿ ಮಾತುಗಳು ಅತ್ಯಂತ ಮಹತ್ವ ಪೂರ್ಣವುಳ್ಳದ್ದಾಗಿದೆ. ವೀರಭದ್ರನನ್ನು ಮೂರು ಅರಳೆ ಬತ್ತಿ ಮಾಡಿ ಸುರುಳಿ ಸುತ್ತಿ ಚಿನ್ನಮ್ಮಳಿಗೆ ಕೊಟ್ಟು ಹೀಗೆ ಹೇಳುತ್ತಾಳೆ-

"ಮೂಗಿನಲಿ ಮುಕ್ಕಣ್ಣ ನಾಲಿಗೇಲಿ ನಾಗೇಂದ್ರ ಚಿನ್ನಿಗ ದೇವರ ಬಟ್ಟ ಕನ್ನಡಿಮಕದ ಓರಿಗೊಡ್ಡ ಆಕಳ ಚಿಕ್ಕರಂಬೆ ಬಾಯಿಗೆ ಮಂಗಳವಾರ ಕೊಡು **(ಅರಳೆ ಬತ್ತಿಗಳನ್ನು)** ಒಂದುವಾರ ಆದಮೇಲೆ ನಿನ್ನ ಮನೆಯ ಮುಂದಕ್ಕೆ ಬಂದು ಕಾಲು ಕೆದರಿ ರೆಂಕಿ ತಿರುವುತ್ತೆ. ಅದರ ಪಾದ ತೊಳೆದು ಪನ್ನೀರು ಕುಡಿದು ನೀನು ಸೆರಗೊಡ್ಡಿ ಬೇಡಿದರೆ ಮೂರು ತೆಪ್ಪೆ 'ಬಂಗಾರ' **(ಸೆಗಣಿ)** ಕೊಡುತ್ತೆ. ಈ ಬಂಗಾರ ಹಾಕಿ ಮಾಳುದ್ದ ಸೊಂಪಾಗಿ ಬೆಳೆದ ಕಿರುಕುಸಾಲೆ ಸೊಪ್ಪು ಬೇಸಿ ಗೋವು ಕಚ್ಚಿ ಬೇವು ಕಚ್ಚಿ ಬೆಳಿಗ್ಗೆ ಊಟುಮಾಡು. ಇದರಿಂದ ಅದು ಗಬ್ಬವಾಗುತ್ತೆ. ಆ ವೊತ್ತು ರಾತ್ರೀಗೆ ಚಕಮಕಿ ಕಲ್ಲು ಹೊಡೆದು ಚಿಕ್ಕಕ್ಕಿ-ದೊಡ್ಡಕ್ಕಿಯ ಆದರದ ಅಡುಗೆ ಮಾಡು. ಆಲು ತುಪ್ಪದಲ್ಲಿ ಪಾಲುಪಂಚಾಮೃತದ ಅಡಿಗೆ ಮಾಡಿ ಜಾಲಿ ಎಲೆ ಜಂಬಿ ಎಲೆ ಪತ್ರಾವಳಿ ಮಾಡಿಕೊಂಡು ಬಂಗಾರದ ಗಿಂಡೀಲಿ ನೀರು ತಗಂಡು ಶೃಂಗಾರ ಮಾಡಿಕೊಂಡು ತಯಾರಾಗಿರು. ನಾನು ಮಲೆಗೊಂಡನನ್ನು ಹೆಂಗಾದರೂ ಮಾಡಿ ಕಲ್ಲು ನೀರು ಕರಗೋ ಹೊತ್ಗೆ ಮನೆಗೆ ಕಳಸ್ತೀನಿ. ಅವನ ನೆಳ್ಳು ನಿನ್ನ ಮಂಚದ ಮೇಲೆ ಬೀಳುತ್ತೆ. ಅವನ್ನ ಉಪಚಾರ ಮಾಡು. ಇಲ್ಲದಿದ್ದರೆ ಹನ್ನೆರಡು ವರುಷದ ತನಕ ಗಂಡನ ಸಂಪರ್ಕ ಇಲ್ಲದೋಳು ಹೇಗೆ ಬಸಿರಾದಳು ಅಂತ ಅಪವಾದ ಬರುತ್ತೆ. ಮಲೆಗೊಂಡನೊಂದಿಗೆ ಒಂದು ರಾತ್ರಿಕಳೆ. ಫಲಗಳ ಕೋಡ್ತೀನಿ. ಅವನ್ನ ಹಟ್ಟಿಲೇ ನಾಕು ದಿನ ಇಟ್ಕೋ. ಎಲ್ಲರ ಕಣ್ಣಿಗೆ ಬೀಳಲಿ" **(ಮೀ. ಶಿ.ಕಾ.ಬೋ.ವಿ-349).**

ಗೌರಸಂದ್ರಮಾರಿ ಚಿನ್ನಮ್ಮಳಿಗೆ ಕೊಡುವ ಸಂತಾನ ಸಂಬಂಧೀ ಸಲಹೆಗಳು ಶೀಲ ಶೌಚದ ಸಾಮಾಜಿಕ ಎಚ್ಚರವನ್ನು ಕೊಡುತ್ತವೆ. ಈ **'ಸಂತಾನ ಸೂತ್ರ'** ಸಾಮಾಜಿಕ ಜವಾಬ್ದಾರಿ ಉಳ್ಳದ್ದಾಗಿರುತ್ತದೆ. ಅಲೌಕಿಕ ಶಕ್ತಿಯೊಂದಿಗೆ ನೆಲಮೂಲದ ಉಕ್ತಿಯ ಬೆಸುಗೆ ಇದಾಗಿದೆ. ವಾತ್ಸಾಯನ ಮುನಿಯ **ಕಾಮಸೂತ್ರ**ಕ್ಕಿಂತಲೂ ಮಿಗಿಲಾದ ನೈಪುಣ್ಯತೆಯನ್ನು ಮಾರಿಯ **'ಸಂತಾನಸೂತ್ರ'**ದಲ್ಲಿ ಕಾಣಬಹುದಾಗಿದೆ.

ಚಿನ್ನಮ್ಮ ಪಡೆದ ಸಂತಾನ ಭಾಗ್ಯದಲ್ಲಿ ಮೂರು ಗಂಡಿನ ಹಿಂದೆ ನಾಲ್ಕನೇಯವಳಾಗಿ ಒಂದು ಹೆಣ್ಣು ಮಗು ಹುಟ್ಟುತ್ತದೆ. ಈ ಹೆಣ್ಣು ಮಗುವನ್ನು **'ಕೇಡುಮಾರಿ'** ಯೆಂದೇ ಜನ ಪರಿಭಾವಿಸುತ್ತಾರೆ. ಚಿನ್ನಮ್ಮ ಪಡಬಾರದ ಸಂಕಷ್ಟಗಳನ್ನು ಅನುಭವಿಸ ಬೇಕಾಗುತ್ತದೆಯೆಂದು ಜನ ಎಚ್ಚರಿಸುತ್ತಾರೆ. ಕೇಡು ಮಾರಿಯನ್ನು ಕೊಲ್ಲುವಂತೆ ಗೌರಸಂದ್ರದ ಮಾರಿ ಮತ್ತು ಮಗ ಜುಂಜಪ್ಪ ಒತ್ತಾಯಿಸುತ್ತಾರೆ. ಆದರೆ ಎಷ್ಟೇ ಆಗಲಿ **'ತಾಯಿಕರುಳು'** ಹೇಗೆ ತಾನೇ ಒಪ್ಪೀತು? ತನಗೆ ಎದುರಾಗುವ ವೈಧವ್ಯದ ನೋವು ಹಾಗೂ ಬಡತನದ ಸಂಕಷ್ಟಗಳನ್ನು ಸ್ವೀಕರಿಸಲು ಸಿದ್ಧಳಾಗುತ್ತಾಳೆಯೇ ಹೊರತು ಮಗುವನ್ನು ಕೊಲ್ಲುವ ಕಾರ್ಯಕ್ಕೆ ಚಿನ್ನಮ್ಮ ಇಳಿಯುವುದಿಲ್ಲ. ನಾಲ್ಕು ಮಕ್ಕಳನ್ನು ಪಡೆದಿದ್ದ ಚಿನ್ನಮ್ಮ ಕಡುಬಡತನದ ಸಂಕಷ್ಟಕ್ಕೆ ಒಳಗಾಗುತ್ತಾಳೆ. ಸುದ್ದಿ ತಿಳಿದ ಅಣ್ಣಗಳು ಬಲವಂತವಾಗಿ ಚಿನ್ನಮ್ಮಳನ್ನು ಮನೆಗೆ ಕರೆತಂದು ಸಮ್ಮಾನ ಮಾಡಿ ಹಿಂತಿರುಗಿ ಕಳುಹಿಸಿ ಕೊಡುತ್ತಾರೆ. ಒಂದು ರಾತ್ರಿ ತನ್ನ ತಾಯಿ ಮನೆಯಲ್ಲಿ ಇಲ್ಲದ್ದಕ್ಕೆ ಜುಂಜಪ್ಪ ಕಲ್ಪಿತ ಸಂಶಯವನ್ನು ವ್ಯಕ್ತಪಡಿಸುತ್ತಾನೆ.

**ನಮ್ಮ ತಾಯಿ ಹಿರಿಯೂರ ಪ್ಯಾಟೆಯೊಳಗೆ**
**ಕ್ವಾಮಶೆಟ್ಟಿ ಮನೆಯೊಳಗೆ**
**ತಾನದೀವಿಗೆ ಹಚ್ಚಿತ್ತು**
**ನಿಲುವುಗನ್ನಡಿ ಕಚ್ಚಿತ್ತು**
**ಆಯಮ್ಮನ ತೋಳಿನ ಮೇಲೆ ಅವನ ತಲೆ**
**ಅವನ ತೋಳಿನ ಮೇಲೆ ಆಯಮ್ಮನ ತಲೆ**
**ಬೆಳಿಗ್ಗೆ ತವರು ಮನೆಗೆ ಹೋದವಳಾಗಿ ಬರ್‍ತಾಳೆ**
**ತಾಯಿ ಮಕ್ಕಳು ನ್ಯಾಯ ಕಳುವಾರಳ್ಳಿ ದಿನ್ನೆವಳಗೆ**
**ಹನ್ನೆರಡು ತಿಂಗಳೂ ನಡೀಬೇಕು**

**(ಚಲುವರಾಜು-ಜುಂ-220)**

ಎಂಬ ತೀರ್ಮಾನಕ್ಕೆ ಬಂದು ಏಳೂರು ಗೌಡರನ್ನು ಪಂಚಾಯ್ತಿಕೆಗೆ ಸೇರಿಸಿ ಸತ್ಯದ ಪಂಥವನ್ನು ಒಡ್ಡುತ್ತಾನೆ- "ಸತ್ಯವಂತಳು ನೀನಾದರೆ ಹುತ್ತದ ಕೋಮೆಯೆದುರಿಗೆ ನಿಂತು ಹುತ್ತದ ನಾಗೇಂದ್ರನ ಕರೆಯಬೇಕು. ಅದು ಬಂದು ನೆತ್ತಿ ಮೇಲೆ ಹತ್ತಿ ಹೆಡೆ ಬಿಚ್ಚಿ ಆಡಬೇಕು. ಹೆಡೆಯಾಡೋ ಸರ್ಪನಸುತ್ತಿ ಸಿಂಬೆ ಮಾಡಿ ಕಣ್ಣಿನ

ಜರಡಿಯಾಗೆ ನೀರು ಹೊರಬೇಕು. ಒಣಗಿದ ಒನಕ್ಯಾಗೆ ಬಳನಾರು ತೆಗಿಬೇಕು. ಕರುವಿಗೆ ಏಳಗ್ಗವ ನುಡಿಸಬೇಕು. ಏಳುತೆರೆಯ ಹಿಂದೆ ಎದೆಹಾಲು ಕರಿಬೇಕು, ಅವು ಬಂದು ನಮ್ಮ ಬಾಯೊಳಗೆ ಬೀಳಬೇಕು. ಹಂಗಾದರೆ ಮಾತ್ರ ತಾಯಮ್ಮನೆಂದು ಕರೆದೇನು" (ಮೀ.ಶಿ.ಕಾ.ಬು.ಏ-359) ತಾಯಿ ಚಿನ್ನಮ್ಮ ಈ ಎಲ್ಲ **'ಸತ್ಯಪರೀಕ್ಷೆ'**ಯಲ್ಲಿ ಯಶಸ್ವಿಯಗುತ್ತಾಳೆ. ಇಷ್ಟಾಗಿಯೂ ಜುಂಜಪ್ಪನಿಗೆ ಸಮಾಧಾನವಾಗುವುದಿಲ್ಲ. ಸತ್ತ ಗಂಡನ ಎಬ್ಬಿಸಿ ಮಾತನಾಡಿಸಬೇಕೆಂಬ ಮತ್ತೊಂದು ಷರತ್ತು ಒಡ್ಡುತ್ತಾನೆ. ಚಿನ್ನಮ್ಮಳ ದುಃಖ ಕಟ್ಟೆಯೊಡೆಯುತ್ತದೆ **'ಹಡೆದೊಟ್ಟೆ ನೋಯಿಸಬೇಡ ಸಾಕು ಮಾಡೋಮಗನೇ'** ಎಂದು ಬೇಡಿಕೊಳ್ಳುವಲ್ಲಿ ತಾಯಿಯ ಹೆತ್ತೊಡಲ ನೋವಿನ, ಕೂಗಿನ ಪರಾಕಾಷ್ಠೆ ಎಷ್ಟೆಂಬುದು ಗೋಚರಿಸುತ್ತದೆ.

ಗಂಡ ತನ್ನ ಪತ್ನಿಯ ಶೀಲ ಶಂಕಿಸಿ ಹಲವು ಹತ್ತು 'ದಿವ್ಯ' ಪರೀಕ್ಷೆಗಳಿಗೆ ಗುರಿ ಪಡಿಸಿರುವುದು ನಮ್ಮ ಪರಂಪರೆಯಲ್ಲಿ ಹಲವು ನಿದರ್ಶಗಳು ನಮ್ಮ ಕಣ್ಣ ಮುಂದಿವೆ. ಆದರೆ ಮಗನೊಬ್ಬ ತನ್ನ ತಾಯಿಯ ಶೀಲ ಶಂಕಿಸಿ ತಾಯಿಯನ್ನು ಅಮಾನವೀಯವಾಗಿ ಸತ್ಯ ಪರೀಕ್ಷೆಗೆ ಒಳಪಡಿಸಿರುವುದು ಬಹುಶಃ ಜುಂಜಪ್ಪ ಒಬ್ಬ ಮಾತ್ರ ಎನಿಸುತ್ತದೆ. ಈ ಸಂಧರ್ಭವನ್ನು ಕುರಿತು ಗಾಯತ್ರಿ ನಾವಡ ಅವರು 'ಮಾನವ ಸಂಬಂಧದ ನೆಲೆಗಳನ್ನು ಮೀರಿ ಪುರಷಾಧಿಕಾರದ ಅಂಕಿತಕ್ಕೆ ಹೆಣ್ಣನ್ನು ಒಳಪಡಿಸುವ ತಂತ್ರವಾಗಿ ನಿಲ್ಲುತ್ತದೆ' ಎಂದು ಹೇಳಿದ್ದಾರೆ. ಮುಂದುವರಿದು 'ಪಿತೃ ಅಧಿಕಾರದ ಪೂರ್ಣ ಹತೋಟಿಗೆ ಒಳಗಾದ **'ಸ್ವಾಧೀನಸ್ತ್ರೀ'** ಮಾದರಿಯಾಗಿ ಚಿನ್ನಮ್ಮ ಗೋಚರಿಸುತ್ತಾಳೆ' ಎಂಬ ಅಭಿಪ್ರಾಯ ಈ ಸಂದರ್ಭಕ್ಕೆ ಸೂಕ್ತವಾಗಿ ಅನ್ವಯಿಸುತ್ತದೆ. ಒಂದು ಕಡೆ ಮಗನಿಂದ ತಾಯಿಯ ಪಾತಿವ್ರತ್ಯ ಪರೀಕ್ಷೆ. ಅಣ್ಣನಿಂದ ತನ್ನ ತಂಗಿ ಶಿಶುವನ್ನು ಕೊಲ್ಲಲು ಒತ್ತಾಯ, ತಂಗಿಯಿಂದಲೇ ಅಣ್ಣನಿಗೆ ವಿಷವಿಕ್ಕಿ ಕೊಲ್ಲಲು ಹಿಂಸಿಸುವ ಗಂಡ ಹಾಗೂ ಮಾವಂದಿರು! ಈ ಪುರಷ ಜಗತ್ತಿನ ಕ್ರೌರ್ಯಕ್ಕೆ ಹೆಣ್ಣಿನ ಅಸಹಾಯಕ ಮೌನವೇ ಉತ್ತರವಾಗುತ್ತದೆ.

ಎತ್ತಪ್ಪನ ಹೆಂಡತಿ **ಮಲ್ಲಮ್ಮ**, ದೈಮಾರನ ಹೆಂಡತಿ **ಕಂಬಕ್ಕ** ಮಲೆಗೊಂಡನ ಹೆಂಡತಿ **ಚಿನ್ನಮ್ಮ** ಇವರುಗಳದು ಈ ಮೊದಲೇ ತಿಳಿಸಿದಂತೆ ನೋವನ್ನು ಉಂಡ ಮೌನಿಗಳು. ಆದರೆ ಸಾಣೇಕೆರೆ ಪುಟ್ಟಣ್ಣನ **ಚಿಕ್ಕ ಹೆಂಡತಿ (ಜುಂಜಪ್ಪ ಕಾವ್ಯ)** ಹಾಗೂ ಚಿತ್ತಯ್ಯನ ಹೆಂಡತಿ **ಗಂಗಿಮಾಳಮ್ಮ** (ಚಿತ್ರ-ದೇವರ ಕಾವ್ಯ) ಇವರು ಭಿನ್ನ ನೆಲೆಯಲ್ಲಿ ನಿಂತು ಪ್ರತಿಭಟನೆಯ ದಾರಿ ತುಳಿಯುತ್ತಾರೆ.

ಜುಂಜಪ್ಪನ ಕಾವ್ಯದಲ್ಲಿ ಬರುವ ಸಾಣೇಕೆರೆ ಪುಟ್ಟಣ್ಣ ಅತ್ಯಂತ ಬಲಶಾಲಿ ಮಾಂತ್ರಿಕ. ಇವನಿಗೆ ಏಳು ಜನ ಹೆಂಡತಿಯರು. ಅವರನ್ನೆಲ್ಲ ತನ್ನ ಅಂಕೆಯಲ್ಲಿಟ್ಟುಕೊಂಡು ದಬ್ಬಾಳಿಕೆ ಮಾಡುತ್ತಿರುತ್ತಾನೆ. ಜುಂಜಪ್ಪ ಪುಟ್ಟಣ್ಣನ ಕಾವಲಿನಲ್ಲಿ ಅನಿವಾರ್ಯವಾಗಿ ತನ್ನ ದನಗಳನ್ನು ತಿರುವಿದಾಗ ಅವನ ಮೇಲೆ ಪುಟ್ಟಣ್ಣ ತನ್ನ ಮಾಂತ್ರಿಕ ಶಕ್ತಿಯ ಬಲಪ್ರಯೋಗ ಮಾಡುತ್ತಾನೆ. ಜುಂಜಪ್ಪ ಅದಕ್ಕೆ ಪ್ರತಿ ತಂತ್ರಗಳನ್ನು ಹೂಡುತ್ತಾನೆ. ಅವುಗಳಲ್ಲಿ ಒಂದು ಹೀಗಿದೆ-ಪುಟ್ಟಣ್ಣನ ಚಿಕ್ಕ ಹೆಂಡತಿಯನ್ನು ಕಂಡು ಅವಳಿಗೆ ತನ್ನ ಗಂಡನ ಕೇಡಿನ

ಕೃತ್ಯಗಳ ಬಗ್ಗೆ ತಿಳಿಹೇಳಿ ಮನವರಿಕೆ ಮಾಡಿಕೊಡುತ್ತಾನೆ. ಜುಂಜಪ್ಪನ ಮಾತುಗಳಿಂದ ಮನ ಪರಿವರ್ತಿತಳಾದ ಚಿಕ್ಕ ಹೆಂಡತಿ ಮನೆಗೆ ಹೋಗಿ ಪುಟ್ಟಣ್ಣನ ಮಾಂತ್ರಿಕ ಪೂಜೆಯ ಮೇಲೆ ತುಂಬಿದ ಕೊಡವನ್ನು ಎತ್ತಿ ಹಾಕುತ್ತಾಳೆ. ಸಿಟ್ಟಿಗೆದ್ದ ಗಂಡ **'ಎಲೇದುಷ್ಟ ಜಂತೇ, ಭ್ರಷ್ಟ ಮುಂಡೆ, ಕಟವಾಯಿಡ್ಡು ಸೀಳಿಬಿಡ್ತೀನಿ'** ಎಂದು ಅಬ್ಬರಿಸುತ್ತಾನೆ. ಆಗ ಹೆಂಡತಿ ಕೊಡುವ ದಿಟ್ಟತನದ ಉತ್ತರ ಹೀಗಿದೆ– **'ಮುದುರಲೇ ಪುಟ್ಟಣ್ಣ ನಿನ್ನ ಅಂತ್ರ ಮಂತ್ರಗಳ. ಬಂದವ್ನೆ ನಿನ್ನ ಹೆಂಡ್ತೀರ ಮಿಂಡ ಜುಂಜಪ್ಪ. ಹೋಗಿ ಅವನ ಪಾದಾನ ಹಿಡಿದರೆ ಬಿಡ್ತಾನೆ ನಿನ್ನ ಪ್ರಾಣಾನೆ'**. ಪುಟ್ಟಣ್ಣ ಬರೀ ಮಾಟಮಂತ್ರಗಳಲ್ಲೇ ಕಾಲ ಕಳೆಯುತ್ತಿದ್ದನೇ ಹೊರತು ಕುಟುಂಬ ಕ್ಷೇಮದ ಬಗ್ಗೆ ಗಮನಹರಿಸುತ್ತಿರಲಿಲ್ಲ. ಅಲ್ಲದೇ ಹೆಂಡತಿಯರನ್ನು ಕಡುಸಿಟ್ಟಿನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದ್ದ. ತತ್ಪರಿಣಾಮವಾಗಿ ಹಲವು ವರ್ಷಗಳ ಈ ದಾಸ್ಯ ಬದುಕಿನಿಂದ ರೋಸಿ ಹೋಗಿದ್ದ ಚಿಕ್ಕ ಹೆಂಡತಿ ಜುಂಜಪ್ಪನ ಆಶೀರ್ವಾದದಿಂದ ತನ್ನ ಗಂಡನ ಕೇಡಿನ ಮಾಂತ್ರಿಕ ಪೂಜಾ ವ್ಯವಸ್ಥೆಗೆ ನೀರು ಸುರಿಯುತ್ತಾಳೆ. ಆ ಮೂಲಕ ತನ್ನ ಅಸಹನೆ ಮತ್ತು ಆಕ್ರೋಶವನ್ನು ವ್ಯಕ್ತಪಡಿಸುತ್ತಾಳೆ. ಜುಂಜಪ್ಪನ ಸಹಾಯದಿಂದ ಏಳೂ ಜನ ಹೆಂಡತಿಯರು ಪುಟ್ಟಣ್ಣನಿಂದ ಬಂಧ ಮುಕ್ತರಾಗುತ್ತಾರೆ.

ಚಿತ್ರದೇವರ ಕಾವ್ಯದಲ್ಲಿ ಉಕ್ತವಾಗಿರುವ ಗಂಗಿಮಾಳಮ್ಮ ಚಿತ್ತಯ್ಯನ ಹೆಂಡತಿ, ಬ್ರಾಹ್ಮಣರ ಹೆಣ್ಣು. ಇವರದು ವರ್ಣ ಸಂಕರದ ಮದುವೆ ಎಂಬುದನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಚಿತ್ತಯ್ಯ ಸಕಲಪರಿವಾರದೊಂದಿಗೆ ಬೇಟೆಗೆ ಹೊರಡಲು ನಿರ್ಧರಿಸಿದಾಗ ಪತ್ನಿ ಗಂಗಿಮಾಳಮ್ಮ ಜೀವಾಪಾಯದ ಬೆದರಿಕೆಯಲ್ಲಿ ಬೇಟೆಗೆ ಹೋಗದಂತೆ ತಡೆಯುತ್ತಾಳೆ. ಗಂಡ ತನ್ನ ಜತೆಯಲ್ಲೇ ಇರಬೇಕೆನ್ನುವ ಭಾರತೀಯ ಸ್ತ್ರೀವಾದಿ ಮನಸ್ಸು ಇಲ್ಲಿಯೂ ಕೆಲಸ ಮಾಡಿರುತ್ತದೆ. ಬೇಟೆಗೆ ಹೋದರೆ ಮತ್ತೆ ಬರುವುದು ಎಂದೋ, ಕಾಡಿನ ಕಡುಕಷ್ಟಗಳನ್ನು ಗೆದ್ದು ಬಂದಂತೆ ಈ ಬೇಟೆ ಎಂಬ ಭಾವನೆ ಅವಳದಾಗಿತ್ತು. ಹಾಗಾಗಿ ಬೇಟೆಗೆ ತಡೆಯೊಡ್ಡುತ್ತಾಳೆ. ಚಿತ್ತಯ್ಯ ತನ್ನ ಮನಮುತ್ತಿನ ಮಡದಿಯ ಮಾತುಗಳಿಗೆ ಎಳ್ಳು ನೀರು ಬಿಡುತ್ತಾನೆ. ಅಷ್ಟೇ ಅಲ್ಲ ಎಲ್ಲರ ಎದುರಿನಲ್ಲಿ ಗಂಗಿ ಮಾಳಮ್ಮಳ ಕೆನ್ನೆಗೆ ಏಟು ಕೊಡುತ್ತಾನೆ. ಚಿತ್ತಯ್ಯನಿಂದ ದಂಡಿನ ಎದುರಿನಲ್ಲಿ ಅವಮಾನಿತಳಾದ ಗಂಗಿಮಾಳಮ್ಮಗೆ ಒಳಗೊಳಗೇ ಅಂತರಂಗದಲ್ಲಿ ಕೋಪ ಮಡುಗಟ್ಟುತ್ತದೆ. ಆದರೂ ಅಸಹಾಯಕಳಾಗಿ ಕಾಲವನ್ನು ಕಾದು ನೋಡುತ್ತಾಳೆ.

ಕತ್ತಲು ಕರಿಮಲೆಯಿಂದ ಬೇಟೆ ಮುಗಿಸಿಕೊಂಡು, ಅನಿರೀಕ್ಷಿತ ತಿರುವಿನ ತಿರುಗುಣಿ ಪಟ್ಟಣವನ್ನು ಜಯಿಸಿಕೊಂಡು ಬಂದ ಅಹಂನಲ್ಲಿದ್ದ ಚಿತ್ತಯ್ಯನ ದಂಡಿಗೆ ಮೊಲವೊಂದು ಸೆಡ್ಡು ಹೊಡೆಯುತ್ತದೆ. ಆ ಮೊಲವನ್ನು ಸದೆಬಡಿಯಲು ಚಿತ್ತಯ್ಯನ ಕೈಲಿ ಸಾಧ್ಯವಾಗದೇ ಹೋದಾಗ ಗಂಗಿಮಾಳಮ್ಮನಲ್ಲಿದ್ದ 'ಮೂಳನಾಯಿ' ಗಿಡುಗಗಳೇ ಬೇಕಾಗುತ್ತವೆ. ಇಲ್ಲಿಯೂ ಚಿತ್ತಯ್ಯನ 'ಪುರುಷ ಮನಸ್ಸು' ಗುಂಗಾರಿ ಹುಳವಾಗಿ ಗುಯ್‌ಗುಡುತ್ತದೆ. ಒಂದು ಹೆಂಗಸು ಅದರಲ್ಲಿಯೂ ತನ್ನ ಹೆಂಡತಿಯ ನಾಯಿಯಿಂದ ತಾನು

ಬದುಕಬೇಕಾದ್ದು ಚಿತ್ತಯ್ಯನಿಗೆ ನುಂಗಲಾರದ ತುತ್ತಾಗುತ್ತದೆ. ತತ್ಪರಿಣಾಮವಾಗಿ ಕಡುಕೋಪಿಷ್ಟನಾಗಿ ನಾಯಿಯನ್ನು ರಕ್ತಕಾರುವಂತೆ ಹೊಡಯುತ್ತಾನೆ. ಬಹುಶಃ ಮಾಳಮ್ಮನ ಮೇಲಿನ ಅಸಹನೆಯನ್ನು ನಾಯಿ ಮೇಲೆ ತೀರಿಸಿಕೊಂಡಂತೆ ಕಾಣುತ್ತದೆ.

ಮಾಳಮ್ಮ ತನ್ನ ಅಂತಃಶಕ್ತಿಯ ಪ್ರತೀಕವಾಗಿ ಸಾಕಿಕೊಂಡಿದ್ದ ತನ್ನ ಮುದ್ದಿನ ನಾಯಿಗೆ ಅವಮಾನ ಹಾಗೂ ಜೀವಹಾನಿ ಮಾಡಿದ ಗಂಡ ಚಿತ್ತಯ್ಯನ ಬಗ್ಗೆ ಮಾಳಮ್ಮಗೆ ಅಸಹ್ಯ ಹಾಗೂ ತಿರಸ್ಕಾರ ಭಾವ ಮೂಡುತ್ತದೆ. ಅಲ್ಲಿಯವರೆಗೆ ಅಂತರಂಗದಲ್ಲೇ ಅದುಮಿಟ್ಟುಕೊಂಡಿದ್ದ ನೋವು ಕೋಪಾಗ್ನಿಯಾಗಿ ಸ್ಫೋಟಗೊಳ್ಳುತ್ತದೆ. ಯಾವ ಪುರುಷ ಪ್ರಾಧಾನ್ಯ ಶಕ್ತಿಗೂ ಸೊಪ್ಪು ಹಾಕದೆ ದಿಟ್ಟತನದಿಂದ ಚಿತ್ತಯ್ಯನಿಗೆ ಛೀಮಾರಿ ಹಾಕುತ್ತಾಳೆ. ಇಂಥಾ ಹೊತ್ತಿನಲ್ಲಿ ಚಿತ್ತಯ್ಯನ **'ಪುರುಷಮನಸ್ಸು'** ಮತ್ತಷ್ಟು ವ್ಯಘ್ರವಾಗಿ ಮಾಳಮ್ಮನ ಮುಖಕ್ಕೆ ಮತ್ತೆ ಮೂರು ಏಟು ಕೊಡುತ್ತಾನೆ. ಚಿತ್ತಯ್ಯನ ಹೊಡೆತಕ್ಕೆ ಮಾಳಮ್ಮನ ಮೂಗುತಿ ನೆಲಕ್ಕೆ ಬೀಳುತ್ತದೆ. ಕೊನೆಗೂ ಮಾಳಮ್ಮ ದಿಟ್ಟ ನಿರ್ಧಾರಕ್ಕೆ ಬಂದು ಚಿತ್ತಯ್ಯನಿಗೆ ಪ್ರತಿರೋಧ ಒಡ್ಡುತ್ತಾಳೆ.

**"ಬಿದ್ದ ಮೂಗುತಿ ಇಡಲ್ಲ**
**ಬಿಟ್ಟ ಗಂಡನ್ನ ಕೂಡಲ್ಲ"**

ಎಂಬ ಪ್ರತಿಜ್ಞೆಯೊಂದಿಗೆ ಅರಮನೆಯನ್ನು ತೊರೆಯುತ್ತಾಳೆ. 'ನಿರ್ಣಾಯಕಗಳಿಗೆಯಲ್ಲಿ ಸಮಾಜ ನಿರ್ಮಿಸಿರುವ ಎಲ್ಲಾ ಪಾವಿತ್ರದ ಗೋಡೆಗಳನ್ನು ಹಕ್ಕಿಯಾಗಿ ಹಾರಿಬಿಡುವ ಅಸಾಧಾರಣ ಶಕ್ತಿಯನ್ನು ಹೆಣ್ಣು ಪಡೆದುಕೊಳ್ಳುತ್ತಾಳೆ' ಎಂಬ ರಹಮತ್ ತರೀಕೆರೆಯವರ ಮಾತು **(ಮರದೊಳಗಣ ಕಿಚ್ಚು ಪು : 219)** ಈ ಸಂದರ್ಭದಲ್ಲಿ ಗಂಗಿ ಮಾಳಮ್ಮಗೆ ಹೆಚ್ಚು ಅನ್ವಯಿಸುತ್ತದೆ.

ಗಾಯಿತ್ರಿ ನಾವಡರವರು ಜನಪದ ಕಾವ್ಯಗಳಲ್ಲಿ ಸ್ತ್ರೀ ಸಂವೇಧನೆಯನ್ನು ಮೂರು ನೆಲೆಗಳಲ್ಲಿ ಗುರುತಿಸಿರುತ್ತಾರೆ.

1. ಗಂಡಿನ ಎಲ್ಲಾ ಅಧಿಕಾರವನ್ನು ಯಾವುದೇ ಸಂಘರ್ಷ ವಿಲ್ಲದೇ ಒಪ್ಪಿಕೊಳ್ಳುವ **'ಗಂಡನ ಸ್ವಾಧೀನಸ್ತ್ರೀ'** ಮಾದರಿ
2. ಗಂಡನ ದಬ್ಬಾಳಿಕೆಯ ಅಧಿಕಾರವನ್ನು ಪ್ರಶ್ನಿಸುವ, ಪ್ರತಿರೋಧಿಸುವ **'ಸಂಘರ್ಷದ ಮಾದರಿ'**
3. ಗಂಡಿನ ಲೋಕದ ಆಚೆಗಿರುವ ಹೆಣ್ಣಿನ **'ಸ್ವಾಯತ್ತ ಮಾದರಿ'**.

ಈ ವಿಭಾಗ ಕ್ರಮದ ಮೊದಲನೆಯ 'ಸ್ವಾಧೀನ ಸ್ತ್ರೀ' ಮಾದರಿಯಾಗಿ ಜುಂಜಪ್ಪನ ತಾಯಿ ಚಿನ್ನಮ್ಮ ಹಾಗೂ ಸೋದರಿ ಮಾರಕ್ಕ ಕಂಡು ಬರುತ್ತಾರೆ. ಎರಡನೆಯ ಕ್ರಮದ ಪ್ರತಿರೋಧಿಸುವ, ಪ್ರಶ್ನಿಸುವ 'ಸಂಘರ್ಷದ ಮಾದರಿ' ಯಾಗಿ ಚಿತ್ತಯ್ಯನ ಪತ್ನಿ ಗಂಗಿಮಾಳಮ್ಮ ಹಾಗೂ ಪುಟ್ಟಣ್ಣನ ಚಿಕ್ಕ ಹೆಂಡತಿ ಇವರು ನಿಲ್ಲುತ್ತಾರೆ.

ಇದುವರೆಗಿನ ಸನ್ನಿವೇಶಗಳನ್ನು ಒಟ್ಟಾರೆಯಾಗಿ ಪರಿಭಾವಿಸಿದಾಗ, ಸ್ತ್ರೀ ಸಂಬಂಧಿತವಾಗಿ ಪುರುಷನ ಸಾಂಸ್ಕೃತಿಕ ಅಹಮಿಕೆಯ ವರ್ತನೆಗಳೇ ಹೆಚ್ಚಾಗಿ ಕಂಡು ಬರುತ್ತವೆ.

## 6.2 ಸತಿ ಪದ್ಧತಿ

ಪ್ರಾಚೀನ ಕಾಲದಿಂದಲೂ ಹೆಣ್ಣಿನ ಬದುಕು ಮತ್ತು ಸ್ಥಾನಮಾನಗಳು ವಿರೋಧಾಬಾಸಗಳಿಗೆ ಒಳಗಾಗಿಯೇ ಬೆಳೆದುಕೊಂಡು ಬಂದಿದೆ. ಬದುಕುಹಸನಾಗಲು ಭೂಮಿ ಸಂತುಷ್ಟದಿಂದಿರಲು ಹೆಣ್ಣು ಪೂಜಿಸಲ್ಪಡಬೇಕು ಎಂಬುದು ಒಂದು ಅಭಿಪ್ರಾಯವಾದರೆ, ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮಾತು, ಮತ್ತೊಂದು ಕಡೆ ಕಾಣಿಸುತ್ತದೆ. ಪಂಚ ಪತಿವ್ರತೆ ಯರನ್ನು ಸೃಷ್ಟಿಮಾಡಿ ಅವರಿಗೊಂದು ದೊಡ್ಡ ಸ್ಥಾನವನ್ನು ಕಲ್ಪಿಸಿಕೊಟ್ಟ ವಿಶೇಷಣಗಳನ್ನು ಹಚ್ಚಿದ ಸಮಾಜದಲ್ಲಿಯೇ ಹೆಣ್ಣು ಅನಾದರಕ್ಕೊಳಗಾಗಿ ಹೇಗೆಂದರೆ ಹಾಗೆ ದುರುಪಯೋಗಗೊಂಡು ಭೋಗದ ವಸ್ತುವಾಗಿಯೇ ಜೀವನ ಮಾಡಿದ ಸಂಧರ್ಭಗಳೇ ಹೆಚ್ಚು. **(ಹನೂರು-ಕದಾದೂ-04)** ಹಾಗಾಗಿ ಹೆಣ್ಣೊಬ್ಬಳು ಅಂತರಂಗದ ನೋವು ಗೀತೆಯಾಗಿ ಈ ರೀತಿ ಬಂದಿದೆ-

**ಎಣ್ಣುಮಗಳ ಯಾಕಡದೆ ನನ್ನಮ್ಮ**
**ಎಣ್ಣಾಗ ಬತ್ತಿ ಉರಿದಂತ- ಮಾನುವರ**
**ಕಣ್ಣಾಗ ನಾವು ಉರುದೇವು**

**(ಹನೂರು : ಕ.ದಾ.ದೂ-30)**

ಹೆಣ್ಣಿಗೆ ಸಾವು ಬರುತ್ತಿದ್ದುದು-ಒಂದು ನೀರಿನಿಂದ, ಮತ್ತೊಂದು ಬೆಂಕಿಯಿಂದ. ಬೆಂಕಿಯ ಸಾವನ್ನು ಇನ್ನೊಂದು ರೂಪದಲ್ಲಿ ಸತಿ ಪದ್ಧತಿಯೆಂದು ಕರೆಯಲಾಗುತ್ತಿದೆ. ಸತಿ ಪದ್ಧತಿಯ ಇತಿಹಾಸದ ಕಾಲಚಕ್ರವನ್ನು ಡಾ|| ಕೃಷ್ಣಮೂರ್ತಿ ಹನೂರುರವರು ತಮ್ಮ 'ಕತ್ತಾಲದಾರಿದೂರ' ಕೃತಿಯಲ್ಲಿ ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಮಹಾಭಾರತ, ರಾಮಯಣ ಕಾಲಾನಂತರ ಸತಿಪದ್ಧತಿ ಹೆಚ್ಚು ಪ್ರಚಲಿತಕ್ಕೆ ಬಂದಿತು. ಭಾಸ, ವಾತ್ಸಾಯನ, ಕಾಳಿದಾಸ, ಶೂದ್ರಕ ಎಲ್ಲರೂ ಸತಿಪದ್ಧತಿಯ ಉಲ್ಲೇಖ ಮಾಡುತ್ತಾರೆ. ಇವರ ಕಾಲಕ್ಕೆ ಹೆಣ್ಣಿನ ಸ್ಥಾನಮಾನಗಳು ಕಡಿಮೆಯಾಗಿದ್ದು, ವಿಧವೆಯರಿಗೆ ಬದುಕಿನ ಕಾಠಿಣ್ಯವನ್ನು ಎದುರಿಸುವುದಕ್ಕಿಂತ ಸಹಗಮನ ಮಾಡುವುದರ ಬಗೆಗೆ ಸಮಾಜ ಕೆಲವು ನಂಬಿಕೆಗಳನ್ನು ಸೃಷ್ಟಿಸಿತು. ವಿಧವೆಗೆ ಸತಿ ಹೋಗುವುದೇ ಧರ್ಮ ಎಂದು ಆಂಗಿರಸ ಹೇಳಿದರೆ, 'ಸತ್ತ ಗಂಡನ ಜತೆಗೆ ಹೆಂಡತಿ ಸಹಗಮನ ಮಾಡಿದರೆ ಗಂಡನ ಅನೇಕ ಕ್ರೂರ ಪಾಪ ಕರ್ಮಗಳನ್ನು ತೊಳೆಯಲು ಸಹಾಯ ಮಾಡುತ್ತಾಳೆ. ನಂತರ ಸ್ವರ್ಗದಲ್ಲಿ ಮೂರು ಕೋಟಿ ವರ್ಷಗಳ ಕಾಲ ಸುಖವಾಗಿರುತ್ತಾರೆ' ಎಂದು ಹಾರೀತ ಆಸೆ ಹುಟ್ಟಿಸಿದ. ಕ್ರಿ.ಶ. ಆರಂಭಕ್ಕೆ ಹುಟ್ಟಿಕೊಂಡ ಈ ಪದ್ಧತಿ ಕ್ರಮೇಣ ಇಡೀ ದೇಶವನ್ನೆಲ್ಲಾ ವ್ಯಾಪಿಸಿ ಕಾಲದಿಂದ ಕಾಲಕ್ಕೆ ಅಸಂಖ್ಯಾತ ಸ್ತ್ರೀಯರನ್ನು ನುಂಗಿತು.

ಕಾಡುಗೊಲ್ಲರ ಮೂಲ ಸಂಸ್ಕೃತಿಯಲ್ಲಿ ಗಂಡ ಸತ್ತರೆ ಹೆಣ್ಣಿಗೆ ಯಾವುದೇ ರೀತಿಯ 'ವೈಧವ್ಯ' ಕ್ರಿಯಾವಿಧಿಗಳು ಅನ್ವಯಿಸುವುದಿಲ್ಲ. ಎಲ್ಲರಂತೆ ಮುತ್ತೈದೆ ಮಂಗಳೆಯಾಗಿಯೇ ಗೌರವ ಪೂರ್ವಕ ಜೀವನ ನಡೆಸುತ್ತಾಳೆ. ಹಾಗಾಗಿ ಈ ಸಮುದಾಯದಲ್ಲಿ ಸತಿಪದ್ಧತಿ ಮೂಲತಹ ರೂಢಿಯಲ್ಲಿ ಇರಲಿಲ್ಲ. ಆದಾಗ್ಯೂ ಅಲ್ಲಲ್ಲಿ ಕೆಲವು ದೃಷ್ಟಾಂತಗಳು ಕಂಡುಬಂದಿ ರುವುದು ಅಚ್ಚರಿಯ ಸಂಗತಿ. **ಕೊಂಡದ ಕಾಟವ್ವ, ಚಿಕ್ಕೊಳು ಹಿರಿದಿಮ್ಮಿವ್ವ, ನಾಗವ್ವ** ಇವರು ಸತಿ ಹೋದ ಕಾಡುಗೊಲ್ಲ ಹೆಣ್ಣುಗಳು. ಕಾವ್ಯವಾಗಿ ಕಂಠಸ್ಥರಾಗಿ ಇನ್ನೂ ಜೀವಂತರಾಗಿರುವ ಮಹಿಳಾ ಮಣಿಗಳು.

ಕೊಂಡದ ಕಾಟವ್ವ ಕೆಂಡವೇರಲು ಕಂಡುಕೊಂಡ ಕಾರಣ ವಿಶೇಷವಾದದ್ದು. ಸಾಮಾನ್ಯವಾಗಿ ಗಂಡಸತ್ತರೆ ಕೊಂಡಕ್ಕೆ ಬೀಳುವುದು ವಾಡಿಕೆಯಲ್ಲಿದ್ದ ರೂಢಿ. ಆದರೆ ಕಾಟವ್ವ ಇದಕ್ಕೆ ವ್ಯತಿರಿಕ್ತ. ಗಂಡ ಇದ್ದೂ, ತನ್ನ ಮೇಲೆ ಬಂದ ಒಂದು ಸಣ್ಣ ಅಪವಾದಕ್ಕೆ ಬೇಸತ್ತು ಕೊಂಡಹಾಯುತ್ತಾಳೆ. ಕಾಟವ್ವ ಸನ್ನೋರ ಬೆಡಗಿನ ಹೆಣ್ಣು ಮಗಳು. ಹಾಗಲವಾಡಿ ಮೂಲದವಳು. ಹುಲಿಕುಂಟೆಯ ಮಾರನೋರ ಬೆಡಗಿನ ಮುತ್ತಣ್ಣ ನೊಂದಿಗೆ ಮದುವೆ ಆದವಳು. ದನಗಳನ್ನು ಕಾಯುತ್ತಿದ ತನ್ನ ಗಂಡನಿಗೆ ದಿನವೂ ಬುತ್ತಿ ಕೊಟ್ಟು ಬರುತ್ತಿದ್ದಳು. ದನಕಾಯುತ್ತಿದ್ದ ನಡುಗಡ್ಡೆಯಲ್ಲಿ ಎಲ್ಲಿಯೂ ನೀರಿನ ಸೆಲೆ ಇರಲಿಲ್ಲ. ಹೀಗಿದ್ದ ತನ್ನ ಗಂಡ ಉಂಡಮೇಲೆ ನೀರು ಎಲ್ಲಿಂದ ಕುಡಿಯುತ್ತಾನೆಂಬ ಕುತೂಹಲ ಮೂಡಿತು. ಒಮ್ಮೆ ಮರೆಯಲ್ಲಿ ನಿಂತು ನೋಡುತ್ತಾಳೆ. ಸಮೀಪದಲ್ಲಿ ಒಂದು ಚಿಲುಮೆಯನ್ನು ತೋಡಲಾಗಿತ್ತು. ಅದು ಕಾಣದಂತೆ ಕಲ್ಲು ಚಪ್ಪಡೆ ಎಳೆದು ಅದರ ಮೇಲೆ ಕಳ್ಳೆ ತೊಟ್ಟು ಇಟ್ಟಿರುವುದನ್ನು ಗಮನಿಸುತ್ತಾಳೆ. ತನ್ನ ಗಂಡ ನಿತ್ಯವೂ ಅಲ್ಲಿಯೇ ನೀರು ಕುಡಿಯುತ್ತಿರುವುದು ತಿಳಿದು ಬಂತು. ಇವಳು ಮರೆಯಲ್ಲಿ ಕದ್ದು ನೋಡುತ್ತಿರುವುದು ಗಂಡ ಮುತ್ತಣನಿಗೆ ಗೊತ್ತಾದ ಕೂಡಲೇ, ತನ್ನ ಚಿಲುಮೆಯ ಗುಟ್ಟು ಹೆಂಡತಿಗೆ ಗೊತ್ತಾಗಿ ಅಪವಿತ್ರವಾಯಿತೆಂದು ಭಾವಿಸಿ ಅಂದಿನಿಂದಲೇ ಅನ್ನ ನೀರು ಬಿಟ್ಟ.

ಕಾಟವ್ವ ಏಳುಕುಂಭದ ಹಾಲನ್ನು ತಲೆಮೇಲೆ ಇಟ್ಟುಕೊಂಡು ಹೆಗಲಿಗೆ ಎರಡು ಕುರಿಮರಿಗಳನ್ನು ನೇತಾಕಿಕೊಂಡು ಪುಚ್ಚಂಡೆ ಕಾಯಿಯನ್ನು ಮೇಲಕ್ಕೆಸೆಯುತ್ತಾ, ಅದು ಕೆಳಗೆ ಬರುವುದರೊಳಗೆ ಕರಿಮಣಿ ಸರ ಏರಿಸುವಂತಹ ಕುಶಲಮತಿಯಾಗಿದ್ದಳು. ಇವಳ ಈ ಕೌಶಲ್ಯವನ್ನು ತಪ್ಪಾಗಿತಿಳಿದ ಮೈದುನ **'ಇವಳು ತನ್ನಣ್ಣನಿಗೆ ಬಾಳುವೆ ಮಾಡುವಂಥ ವಳಲ್ಲ ಬಿನ್ನಾರಿ'** ಎಂದು ಮನದಲ್ಲಿ ಅಂದುಕೊಂಡ. ಮೈದುನನ ಮನದೊಳಗಿನ ಮಾತು ಕಾಟವ್ವಳಿಗೆ ಅರಿವಾಯಿತು. ಇಂಥ ಅಪವಾದ ಬಂದ ಮೇಲೆ ಇನ್ನು ಬದುಕಿರಬಾರದೆಂದು ಭಾವಿಸಿ ಕೊಂಡಹೋಗಲು ನಿರ್ಧರಿಸುತ್ತಾಳೆ.

ನಿಂಬೀಯ ಅಣ್ಣ ಅಂಬಾರ ಕೀಡಾಡುತ
ಬಂದೀಯ ತೋಳ ತಿರುವೂತ/ಮುತ್ತಣ್ಣನ
ರೆಂಬೆ ಕೊಂಡಾಕ ನಡೆದಾಳ.

(ಹನೂರು. ಕ.ದಾ.ದ:113)

ಕಾಟವ್ವಳ ಕಥನ ಕಾವ್ಯದಲ್ಲಿ ಆಕೆ ಕೊಂಡಕ್ಕೆ ಹೋಗುವ ಚಿತ್ರಣ ನೂರಕ್ಕೂ ಹೆಚ್ಚು ತ್ರಿಪದಿಗಳಲ್ಲಿ ಪ್ರಧಾನವಾಗಿ ಮೂಡಿಬಂದಿದೆ.

ಈರೋಬಿ ಕರಿಯೋಬನಹಳ್ಳಿಯ ಹೆಣ್ಣುಮಗಳು. ಆಂಧ್ರದ ಬೆಸ್ತರಹಳ್ಳಿಗೆ ಮದುವೆ ಮಾಡಿಕೊಡಲಾಗಿತ್ತು. ಬಾಣಂತಿ ಯಾದ ಈರೋಬಿಗೆ ಗಂಗಾಳ ತರಲೆಂದು ಘಟ್ಟದ ಕೆಳಗೆ ಹೋಗಿ ಹುಲಿಬಾಯಿಗೆ ಸಿಕ್ಕು ಮಡಿದು ಹೋಗುತ್ತಾನೆ. ಸಾವು ಸುದ್ದಿ ತಿಳಿದ ಈರೋಬಿ ಕೊಂಡ ಸೇರಲು ಸಿದ್ಧತೆ ನಡೆಸುತ್ತಾಳೆ. ಬಂಧು ಬಳಗ ಕೊಂಡವೇರಲು ತಡೆಯೊಡ್ಡಿದಾಗ ಈರೋಬಿ ಅವರ ಒತ್ತಾಸೆಯನ್ನು ನಿರಾಕರಿಸುತ್ತಾಳೆ.

ಗಂಡ ಸಾಯೋಕಿಂತ ಮುಂಡ್ಯಾಗೋಕಿಂತ
ಕಂಡೋರ ಮನೆಯ ಕಸನ್ಹಾಕಿ ಸಾಯೋಕಿಂತ
ಕೊಂಡವನ್ನೋದೆ ಕಡುಲೇಸು

(ಜೀ.ಶಂ.ಪ.ಜನಪದಬಂಡ ಕಾವ್ಯಗಳು-24)

ಈರೋಬಿಯ ಅಂತರಾಳದ ಮಾತುಗಳಿವು. ವಿಧವೆಯಾದವಳು ಸಮಾಜದಲ್ಲಿ ಪಡುವ ಎಲ್ಲಾ ರೀತಿಯ ಕಡುಕಷ್ಟಗಳ ಸಂಕೇತವಾಗಿ ಈ ಮಾತುಗಳು ಹೊರಹೊಮ್ಮಿವೆ.

**ಈರಮಾಸ್ತಮ್ಮ** ಹಿರಿಯೂರು ತಾಲ್ಲೂಕಿನ ಪಿಲಾಲಿ ಗ್ರಾಮದವಳು. ಮೆರಿಯೋರ ಬೆಡಗಿನ ಹೆಣ್ಣು ಮಗಳು. ಈಕೆ ಎಮ್ಮೆಕಾಯಲು ಹೋಗುತ್ತಿದ್ದಳು. ಅಲ್ಲಿಗೆ ಕುರಿಕಾಯಲು ದೊಡ್ಡಣ್ಣನೆಂಬವನು ಬರುತ್ತಿದ್ದ. ಇವನು ಅಜ್ಜೇರ ಬೆಡಗಿನವನು ಇಬ್ಬರಿಗೆ ಪ್ರೇಮ ಬೆಳೆಯುತ್ತದೆ. ಒಮ್ಮೆ ಚೆಲ್ಲಾಟವಾಡುತ್ತಾ ಎಂಭತ್ತು ನಿಂಬೇಹಣ್ಣು ಪೋಣಿಸಿ ಮಡುವುಗೆ ಹಾಕಿ ತಂದು ಕೊಡುವಂತೆ ದೊಡ್ಡನಿಗೆ ತಿಳಿಸುತ್ತಾಳೆ. ನೀರಿಗೆ ಬಿದ್ದ ದೊಡ್ಡಣ್ಣ ತನ್ನ ಮಾರುದ್ದದ ಕೂದಲು ನೀರಿನೊಳಗಿನ ಜಾಲಿ ಕೊನೆಗಳಿಗೆ ಸಿಕ್ಕು ಹಾಕಿಕೊಂಡು ಮಡುವಿನಲ್ಲೆ ಮಡಿದ. ತನ್ನಿಂದಾಗಿ ತನ್ನ ಇನಿಯನ ಪ್ರಾಣ ಹೋದದಕ್ಕೆ ಮನನೊಂದ ಮಾಸ್ತಮ್ಮ ತಾನೂ ಕೊಂಡ ಮಾಡಿಸಿ ಕೆಂಡವಾಗುತ್ತಾಳೆ.

**ನಾಗವ್ವ** ನಾಗಮಂಗಲ ಪರಿಸರದವಳು. ಎಳೆ ವಯಸ್ಸಿನಲ್ಲೆ ನವಿಲೂರ ಚೆಂದಯ್ಯನಿಗೆ ಮದುವೆ ನಿಶ್ಚಿತಾರ್ಥವಾಗು ತ್ತದೆ. ಮದುವೆಯ ಸಿದ್ದತೆಯಲ್ಲಿದ್ದಾಗ ತನ್ನ ಆಡುಗಳನ್ನು ಬೇಡರು ಕದ್ದೊಯ್ದಿದ್ದಾರೆಂದು ತಿಳಿದ ಚೆಂದಯ್ಯ, ಹುಡಕಲಿಕ್ಕೆ ಅಡವಿಗೆ ಹೋಗುತ್ತಾನೆ. ಅಡವಿಯಲ್ಲಿ ಬೇಡರು ಇವನ ತಲೆಯೊಡೆಯುತ್ತಾರೆ. ವಿಷಯವರಿತ ನಾಗವ್ವ ದುಃಖತಾಳಲಾರದೆ ಕೊಂಡವೇರುತ್ತಾಳೆ.

**ಕೊಂಡದ ಸುತ್ತಕೆಂಡದ ಹಸೆಹುಯ್ದು**
**ಬಂಗಾರದ ಕಳಸನಡುವಿರಿಸಿ–ನಾಗವ್ವನ**
**ಕೊಂಡಕೆ ಧಾರೆ ಎರೆದಾರು.**

**(ಜೀ.ಶಂ.ಪ, ಜ.ಖ.ಕಾ–ಪು:35)**

ನಾಗವ್ವ ಮದುವೆಯಾಗದಿದ್ದರೂ ಮದುವೆ ಪ್ರಕ್ರಿಯೆಗಳು ಆರಂಭಗೊಂಡಿದ್ದವು. ನಿಶ್ಚಿತಾರ್ಥವೂ ಮುಗಿದಿದ್ದುದ ರಿಂದ ಅವಳ ಮನಸ್ಸು ಚಿಂದಯ್ಯನನ್ನು ಗಂಡನೆಂದು ಮಾನಸಿಕವಾಗಿ ಸ್ವೀಕರಿಸಿದ್ದಳು. ಇವಳಿಗೆ ಮನೋಪ್ರೀತಿಯೇ ಮುಖ್ಯವಾಗಿ 'ಅವನಿಲ್ಲದೆ ನಾನಿಲ್ಲ' ಎಂದು ಭಾವಿಸುತ್ತಾಳೆ.

**'ಚಿಕ್ಕೋಳು ಹಿರಿದಿಮ್ಮಿ'**ಯ ಕಥನ ಅತ್ಯಂತ ದುರಂತಮಯವಾದುದು ತನ್ನ ಅಣ್ಣಂದಿರಿಗೆ ಬುತ್ತಿಕೊಡಲು ಹೋಗುತ್ತಿದ್ದಾಗ ಅನಾಥ ಬೇಡರ ಬೊಮ್ಮೇಲಿಂಗ ಕಣ್ಣಿಗೆ ಬೀಳುತ್ತಾನೆ. ಅವನನ್ನು ಮನೆಯಲ್ಲಿಟ್ಟುಕೊಂಡು ಅನ್ನ ಬಟ್ಟೆ ಕೊಟ್ಟು ನಮ್ಮ ದನಗಳನ್ನು ಕಾದುಕೊಂಡಿರಲೆಂದು ತನ್ನಣ್ಣಂದಿರಲ್ಲಿ ಕೇಳುತ್ತಾಳೆ. ಅಣ್ಣಂದಿರು ಒಪ್ಪುವುದಿಲ್ಲ.

**ಬೆಲ್ಲದಂಗೆ ಇದ್ದಾರು ಬೇಡರ ಸಂಗ ಬ್ಯಾಡ**
**ತುಪ್ಪದಂಗೆ ಇದ್ದಾರೂ ತುರುಕಾರ ಸಂಗಬ್ಯಾಡ.**

**(ಜೀ.ಶಂ.ಪ, ಜ.ಖ.ಕಾ–ಪು:76)**

ಎಂಬ ನಿಲುವಿನಲ್ಲಿ ಅಣ್ಣಂದಿರು ನಿರಾಕರಿಸಿದರೂ ಹಠಮಾಡಿ ಅಣ್ಣಂದಿರನ್ನು ಒಪ್ಪಿಸಿ ಬೊಮ್ಮೇಲಿಂಗನಿಗೆ ಆಶ್ರಯ ಕೊಡುತ್ತಾಳೆ.

ಮುಂದಿನ ಹಂತದಲ್ಲಿ ಬೊಮ್ಮಲಿಂಗ ಒಂಟಿಯಾಗಿದ್ದ ಹಿರಿದಿಮ್ಮಿಯಮೇಲೆ ಆಕ್ರಮಣ ಮಾಡುತ್ತಾನೆ. ಇದರಿಂದ ಅವಳು ಹೇಗೋ ಬಚಾವಾಗುತ್ತಾಳೆ. ಋತುಮತಿಯಾಗಿ ಗುಡಿಸಲಿಲಲ್ಲಿ ಇದ್ದಾಗಲೂ ಬೊಮ್ಮೇಲಿಂಗ ಕಿರಿಕಿರಿ ಉಂಟು ಮಾಡುತ್ತಾನೆ. ಇಲ್ಲೆಲ್ಲೂ ಬೊಮ್ಮೇಲಿಂಗನ ದುಷ್ಟ ನಡಾವಳಿಕೆಯನ್ನು ಮರೆಮಾಚಿಕೊಂಡು ಅಣ್ಣಂದಿರಿಗೆ ತಿಳಿಸುವುದೇ ಇಲ್ಲ. ತಿಮ್ಮವ್ವಗೆ ಮದುವೆಯಾಗುತ್ತದೆ. ಗಂಡನೊಂದಿಗೆ ಸಂಭ್ರಮದಿಂದ ಅಡವಿಯಲ್ಲಿ ಹೋಗುತ್ತಿರುವಾಗ ಬೊಮ್ಮೇಲಿಂಗನೂ ಬೆನ್ನು ಹತ್ತುತ್ತಾನೆ. ಬಾವಿ ಬಳಿಯಲ್ಲಿ ಬುತ್ತಿ ಉಣ್ಣಲಿಕ್ಕೆ ಕೂತಾಗ ಬೊಮ್ಮೆಲಿಂಗ ತಿಮ್ಮವ್ವಳ ಗಂಡನನ್ನು ಕತ್ತರಿಸಿ ಹಾಕುತ್ತಾನೆ. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ತಿಮ್ಮವ್ವ

**'ನೀನೇಯೆ ಗಂಡಕಾಣೋ, ನಾನೇಯೇ ಹೆಂಡ್ತಿಕಾಣೋ**
**ಬೇಡರಬೊಮ್ಮೇಲಿಂಗ ಬುತ್ತೀಯ ಉಣಬಾರೋ'**

**(ಜೀ.ಶಂ.ಪ, ಜ.ಖ.ಕಾ–ಪು:80)**

ಎನ್ನುತ್ತಾ ಅವನಿಗೆ ಬುತ್ತಿ ನೀಡುತ್ತಾಳೆ. ಬೊಮ್ಮೇಲಿಂಗ ಆನಂದದಿಂದ ಉಣ್ಣುತ್ತಿರುವಾಗ ತಿಮ್ಮವ್ವ ಅವನ ತಲೆಯನ್ನು ಕತ್ತರಿಸುತ್ತಾಳೆ. ಗಂಡನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ಬೊಮ್ಮೇಲಿಂಗನ ತಲೆಯನ್ನು ಕಾಲಲ್ಲಿ ತಳ್ಳಿಕೊಂಡು ಬಂದು ಊರುಸೇರಿ ಕೊಂಡ ಹಾಯುತ್ತಾಳೆ.

**ತಂಗಮ್ಮ** ಮಧುಗಿರಿ ತಾಲ್ಲೂಕಿನ ಗಂಜಲಗುಂಟೆಯ ಮಾರ್‍ನೋರ ಬೆಡಗಿನ ಹೆಣ್ಣುಮಗಳು. ಸೋಗೇನ ಹಳ್ಳಿಯ ಅರೇನವರ ಬೆಡಗಿನ ಜೋಗಯ್ಯನಿಗೆ ಮದುವೆ ಮಾಡಿಕೊಡಲಾಗಿತ್ತು. ಗಂಡ ಅಕಾಲ ಮರಣಕ್ಕೆ ತುತ್ತಾಗುತ್ತಾನೆ. ಒಬ್ಬ ಮಗನೊಂದಿಗೆ ಜೀವನ ನಡೆಸುತ್ತಾಳೆ. ತಂಗಮ್ಮನದು ಕಣ್ಣುಕುಕ್ಕುವಂಥ ಸೌಂದರ್ಯ. ಅವಳ ರೂಪಿನಿಂದ ಆಕರ್ಷಿತನಾದ ಪಾಳೆಯಗಾರ ಅವಳ ಮಾವನನ್ನು ಕರೆಯಿಸಿ ಆತನ ಸೊಸೆಯನ್ನು ಅರಮನೆಗೆ ಕಳುಹಿಸಿಕೊಡಲು ಹೇಳುತ್ತಾನೆ. ವಿಧಿಯಿಲ್ಲದೆ ಮಾವ ಸೊಸೆಗೆ ವಿಷಯ ತಿಳಿಸಿದಾಗ 'ಕೊಂಡಕ್ಕಾದರೂ ಬೀಳ್ತೀನಿ ಕೂಡೋದಿಲ್ಲ' ಎನ್ನುತ್ತಾಳೆ. ತನಗೆ ದಕ್ಕದ ಹೆಣ್ಣನ್ನು ಕೊಂಡಕ್ಕೆ ಬೀಳಲು ಪಾಳೆಗಾರನೇ ಒತ್ತಾಯಿಸುತ್ತಾನೆ.

ಕೊಂಡಕ್ಕೆ ಬೀಳುವ ದಿನ ಬಂದಾಗ ಎಳೆ ಕಂದನನ್ನು ಬಿಟ್ಟು ಹೋಗುವ ಸಂಕಟ. ಮಗುವಿನ ಭವಿಷ್ಯದ ಬಗ್ಗೆ ಆತಂಕದಿಂದ ಸರೀಕರನ್ನು ಬೇಡುತ್ತಾಳೆ.

**ಅನ್ನ ಇಕ್ಕೀರಮ್ಮ ಕಂಬಳಿಯ ಕೊಡಿರಮ್ಮ**
**ಮುಂಡೆಯ ಮಗನೆಂದು ಬಯದಿರಮ್ಮ**
**ಮುತ್ತೈದೆತನಕ್ಕೆ ಶಿವ ಮುನಿದ**
**(ಮೀ.ಶಿ.ಕಾ.ಗೋ.ಬು.ವೀ:ಪು-175)**

ಎಂದು ಹಳಹಳಿಸುತ್ತಾ ತನ್ನ ಕಂದನನ್ನು ಊರವರಿಗೆ ಒಪ್ಪಿಸಿ ಕೊಂಡಕ್ಕೆ ಬಿದ್ದು ಮಹಾಸತಿಯಾಗುತ್ತಾಳೆ.

ಕೆಲಸಮಯದಲ್ಲಿ ಸತಿಯರನೇಕರು ಗಂಡಂದಿರು ತೀರಿಕೊಂಡರೆ ಬೆಂಕಿಗೆ ಬೀಳುವ ಆಸೆ ತೋರಿಸುತ್ತಿರಲಿಲ್ಲ. ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೂದೂಂಟು. ಅಂಥವರನ್ನು ಹಿಡಿದುತಂದು ಬಲವಂತವಾಗಿಯಾದರೂ ಬೆಂಕಿಗೆ ತಳ್ಳುತ್ತಿದ್ದರು. ಹಾಗೂ ಒಂದು ವೇಳೆ ತಪ್ಪಿಸಿಕೊಂಡು ಗ್ರಾಮದಲ್ಲಿ ಬದುಕಲು ಇಚ್ಛೆ ಪಟ್ಟರೆ ಜನರಿಂದ ಅನಾದರ, ನಿಂದೆ, ಅಗೌರವ, ಬೈಗುಳ ತಪ್ಪಿದ್ದಲ್ಲ. ಇದಕ್ಕೆ ನಿದರ್ಶನವಾಗಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾ॥ ಯರಬಳ್ಳಿ ಗ್ರಾಮದ ಬಳಿ ಮಹಾಸತಿ ವೀರತಿಮ್ಮವ್ವನ ಕೊಂಡವಿದೆ. ಅದರ ಬಳಿಗೆ ಮತ್ತೊಂದು ಚಿಕ್ಕ ಜಗುಲಿ ಕೊಂಡವಿದೆ. ಅದು ತಪ್ಪಿಸಿಕೊಂಡು ಓಡುತ್ತಿದ್ದವಳನ್ನು ಹಿಡಿದುತಂದು ಬೆಂಕಿಗೆ ತಳ್ಳಿ ನಂತರ ಕಟ್ಟಿದ್ದು. ಈಕೆಗೆ ಈಗಲೂ ಪೂಜೆಇಲ್ಲ.

ಯಾವುದೇ ವರ್ಗದ ಸ್ತ್ರೀಗೆ ವೈಧವ್ಯ ಹಿತವನ್ನು ತರುವುದಂತೂ ಆಗಿರದೆ, ಅದಕ್ಕಿಂತ ಸತ್ತವನೊಡನೆ ಚಿತೆಯೇರಿ ಎಲ್ಲರ ಗೌರವಕ್ಕೆ ಪಾತ್ರಳಾಗುವುದು, ದೇವತೆಯಾಗಿ ರಾರಾಜಿಸುವುದು, ಹಿರಿಯರು ಹೇಳಿದಂತೆ

ಸ್ವರ್ಗದಲ್ಲಿ ಮೂರುಕೋಟಿ ವರ್ಷ ಸುಖವಾಗಿರಬಹುದಾದ್ದೇ ಮೇಲು ಎನಿಸಿ ಸಾಯುತ್ತಿದ್ದರು. ಇದಕ್ಕೆ ಸಮಾಜವೂ ಒತ್ತಾಸೆಯಾಗಿ ನಿಲ್ಲುತ್ತಿತ್ತು. ಈ ಮೊದಲು ಸತಿಯರ ಕಥೆಗಳನ್ನು ವರ್ಣರಂಜಿತಾಗಿ ಹೇಳುತ್ತಾ ಅವರಂತಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಲಾಗುತ್ತಿತ್ತು. ಕೆಲವೊಮ್ಮೆ ಒತ್ತಾಯ ಪೂರ್ವಕವಾಗಿ ಕಥನವನ್ನು ಕೇಳಿಸುತ್ತಿದ್ದರು.

**ದೊಡ್ಡೋಳು ಕೆಂಚವ್ವ ಸ್ಮರಣೀಯ ಹೇಳುವಾಗ,**
**ನಮ್ಮತ್ತೆ ಬೈದಾಳೆಂದು ಮನೆಗೆದ್ದು ಹೋದಾರೆ**
**ಕತ್ತೆ ಜನುಮಾಕೆ ಎಳಸ್ಯಾರೆ.**

**(ಜೀ.ಶಂ.ಪ–ಜೀ.ಜ.ಕ.ಕಾ:ಪು–37)**

ಇಂಥ ಕಥನಗಳನ್ನು ಕೇಳಿಸಿಕೊಂಡ ಮೇಲೆ ಪತಿ ತೀರಿಕೊಂಡ ಮೇಲೆ ಬದುಕಬೇಕು ಎನ್ನುವವರಿಗಿಂತ ಕೆಂಡ ಕೊಂಡವಾಗಬೇಕು ಎಂದು ಬಯಸುತ್ತಿದ್ದವರ ಸಂಖ್ಯೆಯೇ ಹೆಚ್ಚು.

ಸತೀಗೀತೆಗಳನ್ನು ವಿಜೃಂಭಿಸಿ, ಮೈದುಂಬಿ ಹೇಳುವ ಗಾಯಕಿಯರ ಮನದಾಳದ ಮಾತುಗಳೇನು ಎಂಬುದೂ ಇಲ್ಲಿ ಮುಖ್ಯವಾಗುತ್ತದೆ. ಹಾಗಾಗಿ ಒಂದು ಸಂದರ್ಶನದ ತುಣಕನ್ನು ನೋಡಬಹುದು.

| | |
|---|---|
| **ಸಂದರ್ಶಕರು** | **: ಡಾ॥ ಕೃಷ್ಣಮೂರ್ತಿ ಹನೂರು.** |
| **ಗಾಯಕಿ** | **: ಓಬಳಾಪುರದ ಚೌಡಮ್ಮ** |
| **ಕಥನ** | **: ತಾಡಿನಾಗಮ್ಮ** |
| **ಕೃತಿ** | **: ಕತ್ತಾಲದಾರಿದೂರ–ಪು : 45** |

ಪ್ರಶ್ನೆ : ನಾಗಮ್ಮ ಕೊಂಡದೊಳಕ್ಕೆ ಯಾಕೆ ಬೀಳಬೇಕಾಗಿತ್ತು ?

ಉತ್ತರ : ಅಯ್ಯಾ ಯಜಮಾನ್ರು ತೀರ್ಕಂಬ್ಲಿಲ್ಲೆ? ಇನ್ನು ಆವಣ್ಮಗಳು ಮಾಡದೇನದೆ ?

ಪ್ರಶ್ನೆ : ಸರಿಕಣಜ್ಜಿ, ಹಂಗಾದ್ರೆ ನಾಗಮ್ಮನ ಗಂಡ ತೀರ್ಕಂಡ ಅಂತ ಬೆಂಕಿ ಪಾಲಾದ್ಲಲ್ಲ, ಅದನ್ನ ನೋಡ್ದೋರು ಇವತ್ತು ಕೇಳ್ದೋರು, ಒಂದ್ಲಕ್ಷ ಗಂಡ ಇಲ್ಲವಾದ ಅಂತೇಳಿ ಬೆಂಕಿ ಪಾಲಾಯ್ತಾರ ಅಜ್ಜಿ? ಅದೆಲ್ಲಾರ ಕಂಡಿದ್ದೀಯ?

ಉತ್ತರ : ಇಲ್ಲ ಈ ಕಾಲದಲ್ಲಿ ನಾನು ಯಾರನ್ನೂ ಕಂಡಿಲ್ಲ.

ಪ್ರಶ್ನೆ : ಮತ್ತೆ ನಾಗಮ್ಮನಿಗಾದ್ರೆ ಗಂಡತೀರ್ಕಂಡಮ್ಯಾಲೆ ಇನ್ನೇನು ಮಾಡಾದುಂಟು ಅಂತೀಯಲ್ಲ? ಗಂಡತೀರ್ಕಂಡ ಮೇಲೂ ಇದ್ದಿದ್ರೆ ಚೆನ್ನಾಗಿರ್ತಿರ್ಲಿಲ್ವ? ಹಂಗೆಲ್ಲ ಪಾಪ ಬೆಂಕಿಗೆ ಬಿದ್ದು ಮೈಕೈ ಸುಟ್ಟುಕೊಂಡು ನೋವುಪಟ್ಟು ಸಾಯಬೇಕೇ?

ಉತ್ತರ : ಅಯಾ ತೆಗಿಯಪ್ಪ, ಯತ್ಲಾಮಾತು, ಅವತ್ತು ಅಯಮ್ಮ ಆತರದಲ್ಲಿ ಕೆಂಡಕೊಂಡವಾದುದ್ದೇ ದೇವ್ತಿಯಾಗಿ ಪೂಜಿ ಮಾಡಸ್ಕತಾವ್ಳೆ. ಕೊಂಡಾಡುಸ್ಕತವಳೆ. ಗಂಡಸತ್ತು ಬದುಕುಮಾಡ ಮುಂಡೇರೆಲ್ಲಾ ಅಂಗೇ ಕೊಂಡಾಡುಸ್ಕಮ್ತಾರ?

ಪ್ರಶ್ನೆ : ಸರಿಕಣಜ್ಜಿ ಒಪ್ದೆನಿನಮಾತು, ಗಂಡತೀರ್‍ಕಂಡಮ್ಯಾಲೆ ಇರಬೋದಾಗಿತ್ತು. ತಪ್ಪೇನು?

ಉತ್ತರ : ವಯಸ್ಸಾಗದೆಂಗ್ಸಿನ ಯಜಮಾನ ತೀರ್‍ಕಂಡ್ರ, ಅವ್ಳು ಬದ್ಕು ಮಾಡಾದು ಕಷ್ಟ. ಗಂಡಿಲ್ಲಾಂದ್ಮೇಲೆ ಈ ನರಜನ್ಮ ಇದ್ದೇನ್ ಸಾರ್ತ್ಕ. ಮುಂಡೆ ಅಂತ ಅನಿಸ್ಕಂಡು ತಿರುದು ಬಾಳು ಬದ್ಕು ಮಾಡಾಕಿಂತ ಸಾಯದು ಉತ್ಮ. ಇರಬಾರದು.

ಪ್ರಶ್ನೆ : ಯಾಕಜ್ಜಿ ಸಾಯ್ಬೇಕು? ಲಗ್ನ ಆಗಿ ಎರಡುಮೂರು ವರ್ಷ ಆಗಿರ್‍ತವೆ ಅಂತಿಟ್ಗೊ. ಗಂಡ ತೀರ್‍ಕಂಡ ಅನ್ಕೋ ಬೆಂಕಿಗೆ ಬಿದ್ಬುಡದಾ?

ಉತ್ತರ : ಅಂತವುರ್‍ದೆ ಕಷ್ಟ ಅಂದದ್ದು. ವಯಸ್ಸಾದೆಂಗ್ಸಿನ ಯಜಮಾನ ತೀರ್‍ಕಂಡ್ರೆ ಒಂತರ. ಕೋರಿಯಾದವಳ ಯಜಮಾನ ತೀರ್‍ಕಂಡ್ರೆಂದ್ರ ಇನ್ನೂ ಕಷ್ಟ. ನಾದ್ನೀರು, ಅತ್ಗೇರು ಇರಾಮನ್ಲಿ ಕಸಮುಸಿ ಬಳ್ಕಂಡು, ಬಾಸ್ಕಂಡು, ಮೂಲೆವಳಗೆ ಮುಟ್ಟಾದವಳಂಗೆ ಕೂತುಣ್ಣಾದ್ಯಾಕಪ್ಪ? ನಾಯಿ ಬಾಳು. ಅತ್ಲಾಗೆ ಸತ್ರಾಗ್ದೆ?

ಈ ಸಂದರ್ಶನದ ತುಣಿಕಿನಲ್ಲಿ ಗಾಯಕಿ ಚೌಡಮ್ಮನ ಮಾತುಗಳು ತುಂಬಾ ಅರ್ಥಗರ್ಭಿತವಾಗಿವೆ. ಸಂದರ್ಶನದ ಆರಂಭದಲ್ಲಿ ಮಾಮೂಲಿಯಾಗಿ ವೈಭವೀಕರಣದ ಮನೋಸ್ಥಿತಿಯಲ್ಲಿಯೇ ಉತ್ತರಿಸುತ್ತಾಳೆ. ತದನಂತರ ಸಂದರ್ಶಕರು ಮತ್ತೆ ಮತ್ತೆ ಕೊಂಡಹಾಯುವುದು ಎಷ್ಟರಮಟ್ಟಿಗೆ ಸರಿ ಎಂಬಪ್ರಶ್ನೆಗಳಿಗೆ ಕೊನೆಯಲ್ಲಿ ಗಾಯಕಿ ಸತ್ಯವನ್ನು ಅನಾವರಣಗೊಳಿಸುತ್ತಾಳೆ. ಸಂದರ್ಶನದ ಕೊನೆಯಲ್ಲಿ ಚೌಡಮ್ಮ ತೋರಿಸುವ ವಾಸ್ತವದ ಸತ್ಯದ ಸಂಗತಿಗಳೇ ಪುರುಷ ಪ್ರಧಾನ್ಯ ವ್ಯವಸ್ಥೆಗೆ ಹಿಡಿದ ಸಾಕ್ಷೀ ಮಾತುಗಳಾಗಿವೆ.